

# ಜ್ಞಾನ-ದೀಪ್ತಿ



## 6 ನೇ ತರಗತಿ

## ಸಮಾಜ ವಿಜ್ಞಾನ ಪ್ರಶ್ನೋತ್ತರ ಮಾಲಿಕೆ

*(2021–22)*








ಸಂಗ್ರಹ:

**ಶ್ರೀ ಸ್ವಾಮಿ ವಿವೇಕಾನಂದ ಸಮಾಜ ವಿಜ್ಞಾನ ಸಂಘ**

**ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಗುಡುದೂರು, ಬಳ್ಳಾರಿ ಜಿಲ್ಲೆ, ಮೊ: 9036653155**


















*ಶಾರದಾಂಬೆ, ಭಾರತಾಂಬೆ, ಕನ್ನಡಾಂಬೆ, ಗುಂಜಲಾಂಬೆ & ವಿಜಯಗೌರಾಂಬೆ ಇವರ ಕೃಪೆಯಿಂದ*

ಶ್ರೀ ಸ್ವಾಮಿ ವಿವೇಕಾನಂದ ಗುರೂಜಿ ಹವ್ಯಾಸಿ ಪ್ರಕಾಶನ, ಗುಡುದೂರು–ಮಾಗಳ

## ಜ್ಞಾನ Knowledge :

"ವಿಷಯಗಳ ಗ್ರಹಣ, ತಿಳುವಳಿಕೆ, ಬುದ್ಧಿಶಕ್ತಿ ಇವೆಲ್ಲವುಗಳನ್ನು ಒಳಗೊಂಡ ಮನಸ್ಸು ಮಾಡುವ ಪ್ರಕ್ರಿಯೆಯೇ ಜ್ಞಾನ"

## ವಿಜ್ಞಾನ : Science :

"ಜ್ಞಾನದ ಕ್ರಮಬದ್ದವಾದ ಅಧ್ಯಯನವೇ ವಿಜ್ಞಾನ."

**ವಿಜ್ಞಾನದ ಎರಡು ಶಾಖೆಗಳು**

- ★ ನೈಸರ್ಗಿಕ ವಿಜ್ಞಾನ Natural Science
- ★ ಸಮಾಜ ವಿಜ್ಞಾನ Social Science

## ಸಮಾಜ ವಿಜ್ಞಾನ Social Science :

"ಸಾಮಾಜಿಕ ಪರಿಸರಕ್ಕಾಗಿ, ಸಾಮಾಜಿಕ ಪರಿಸರದ ಮೂಲಕ ಸಾಮಾಜಿಕ ಪರಿಸರದ ಅಧ್ಯಯನವೇ ಸಮಾಜ ವಿಜ್ಞಾನ."

### ಸಮಾಜ ವಿಜ್ಞಾನದ ಶಾಖೆಗಳು & ಅವುಗಳ ಪಿತಾಮಹರು

- ★ ಇತಿಹಾಸ : ಹೆರಡೋಟಸ್
- ★ ಪೌರನೀತಿ : ಬೆಂಜಮೀನ್ ಫ್ರಾಂಕ್ಲಿನ್
- ★ ರಾಜ್ಯಶಾಸ್ತ್ರ : ಅರಿಸ್ಟಾಟಲ್
- ★ ಭೂಗೋಳಶಾಸ್ತ್ರ : ಎರಟೋಸ್ತನೀಸ್
- ★ ಸಮಾಜಶಾಸ್ತ್ರ : ಆಗಸ್ಟ್ ಕಾಮ್ಟೆ
- ★ ಅರ್ಥಶಾಸ್ತ್ರ : ಆಡಂಸ್ಮಿತ್
- ★ ವ್ಯವಹಾರ ಅಧ್ಯಯನ : .....................

## ಇತಿಹಾಸ History :

"ಗತಕಾಲದಲ್ಲಿ ಗತಿಸಿ ಹೋದ ಘಟನೆಗಳ ಕ್ರಮಬದ್ದ ದಾಖಲೆಯೇ ಇತಿಹಾಸ."

## ಪೌರನೀತಿ Civics:

"ಮಾನವನ ಅಂತರ್ಗತ ಶಕ್ತಿಗಳ, ಅವನ ಕಾರ್ಯಗಳ ಒಟ್ಟು ಲಾಭವು ತನ್ನ ಸಹಚರರಿಗೆ ದೊರಕುವಂತೆ ಮಾಡುವ, ಪೌರನ ಹಕ್ಕು & ಕರ್ತವ್ಯಗಳ ಕುರಿತ ಕ್ರಮಬದ್ದ ಅಧ್ಯಯನ."

## ರಾಜ್ಯಶಾಸ್ತ್ರ Political Science :

"ಮಾನವನ ರಾಜಕೀಯ ಚಟುವಟಿಕೆಗಳು & ರಾಜ್ಯದ ರೂಪು ರೇಷೆಗಳಿಗೆ ಸಂಬಂಧಿಸಿದ ಕ್ರಮಬದ್ಧ ಅಧ್ಯಯನ."

## ಭೂಗೋಳಶಾಸ್ತ್ರ Geography :

"ಭೂ ಮೇಲ್ಮೈ ಲಕ್ಷಣಗಳು & ಭೂಮಿಯ ಮೇಲಿನ ಮಾನವನ ಚಟುವಟಿಕೆಗಳ ವೈಜ್ಞಾನಿಕ ಅಧ್ಯಯನ."

## ಅರ್ಥಶಾಸ್ತ್ರ Economics :

"ಮಾನವನ ಯೋಗಕ್ಷೇಮ, ಭೌತಿಕ ಸುಖ & ಅವನ ಆರ್ಥಿಕ ಚಟುವಟಿಕೆಗಳ ವೈಜ್ಞಾನಿಕ ಅಧ್ಯಯನ."

## ಸಮಾಜಶಾಸ್ತ್ರ Sociology :

"ಮಾನವನ ಸಾಮಾಜಿಕ ಚಟುವಟಿಗಳು, ಸಾಮಾಜಿಕ ಸಮಸ್ಯೆಗಳ ಕುರಿತ ವೈಜ್ಞಾನಿಕ ಅಧ್ಯಯನ."

## ವ್ಯವಹಾರ ಅಧ್ಯಯನ Business Study :

"ಮಾನವನ ದಿನನಿತ್ಯದ ವ್ಯವಹಾರಿಕ ಚಟುವಟಿಕಗಳ ಕ್ರಮಬದ್ದ ಅಧ್ಯಯನ."

## ಭಾರತ ದೇಶದ ಪ್ರಮುಖ ಐತಿಹಾಸಿಕ ಘಟನೆಗಳು

- ★ ಸಿಂದೂ ಬಯಲಿನ ನಾಗರಿಕತೆ ಸಾ.ಶ.ಪೂ. 3300–1700
- ★ ವೇದಗಳ ಕಾಲ ಸಾ.ಶ.ಪೂ. 1500–1100
- ★ ಮೌರ್ಯ ಸಾಮ್ರಾಜ್ಯ ಸಾ.ಶ.ಪೂ. 322–187
- ★ ಶಕ ವರ್ಷ ಸಾ.ಶ. 78
- ★ ವಾಸ್ಕೋಡಿಗಾಮಾ ಭಾರತದ ಕೇರಳದ ಕಲ್ಲಿಕೋಟೆ ತಲುಪಿದ್ದು: ಸಾ.ಶ.1498
- ★ ಭಾರತದಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಸ್ಥಾಪನೆ: ಸಾ.ಶ.1600
- ★ ಪ್ಲಾಸೀ ಕದನ : ಸಾ.ಶ.1757
- ★ ಬಕ್ಸಾರ್ ಕದನ : ಸಾ.ಶ.1764
- ★ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ : ಸಾ.ಶ.1857
- ★ ಖಿಲಾಫತ್ ಚಳುವಳಿ/ಅಸಹಕಾರ ಚಳುವಳಿ: ಸಾ.ಶ.1920
- ★ ಭಾರತ ಬಿಟ್ಟು ತೊಲಗಿ/ಕ್ವಿಟ್ ಇಂಡಿಯಾ ಚಳುವಳಿ: ಸಾ.ಶ.1942
- ★ ಭಾರತ ದೇಶ ಸ್ವಾತಂತ್ರ್ಯ : ಸಾ.ಶ.1947
- ★ ಭಾರತ ದೇಶದ ನೂತನ ಸಂವಿಧಾನ ಜಾರಿ: ಸಾ.ಶ.1950
- ★ ಭಾರತ– ಚೀನಾ ಯುದ್ಧ : ಸಾ.ಶ.1962
- ★ ಭಾರತ–ಪಾಕ್ ಯುದ್ಧ : ಸಾ.ಶ. 1965
- ★ ಕಾರ್ಗಿಲ್ ಕದನ/ವಿಜಯ : ಸಾ.ಶ. 1999

**ಪ್ರಪಂಚದ ಪ್ರಥಮ ಮಹಾಯುದ್ಧ :**

28 ಜುಲೈ 1914– ನವೆಂಬರ್ 11 1918

**ಪ್ರಪಂಚದ ದ್ವಿತಿಯ ಮಹಾಯುದ್ಧ :**

1 ನೇ ಸೆಪ್ಟಂಬರ್ 1939– 2 ನೇ ಸೆಪ್ಟಂಬರ್ 1945

## ಪದಗಳ ಉತ್ಪತ್ತಿ

- ★ **Science: Scientia :** (ಸೈನ್ಶಿಯಾ): ಜ್ಞಾನ
- ★ **History :** ಗ್ರೀಕ್ ಭಾಷೆಯ **Historia:** ವಿಚಾರಣೆ/ ತನಿಖೆ ಮಾಡು/ ಸತ್ಯಾನವೇಷಣೆ
- ★ **Civics:** ಲ್ಯಾಟಿನ್ ಭಾಷೆಯ **Civitas:** ನಗರ/ರಾಜ್ಯ & **Civis:** ಪೌರ
- ★ **Political Science :** ಗ್ರೀಕ್ ಬಾಷೆಯ **Polis :** ರಾಜ್ಯ **Scire :** ಶೋಧನೆ/ಅಧ್ಯಯನ
- ★ **Sociology:** ಲ್ಯಾಟಿನ್ ಭಾಷೆಯ **Socious :** ಸಮಾಜ & ಗ್ರೀಕ್ ಭಾಷೆಯ **Logos :** ಜ್ಞಾನ/ ಅಧ್ಯಯನ
- ★ **Gepgraphy:** ಗ್ರೀಕ್ ಭಾಷೆಯ **Geo :** ಭೂಮಿ & **Graphian :** ಬಿಡಿಸು/ಬರೆ/ರಚಿಸು/ಅಭ್ಯಸಿಸು
- ★ **Economics:** ಗ್ರೀಕ್ ಭಾಷೆಯ **Ocus :** ಗೃಹ & **Nomus:** ನಿರ್ವಹಣ
- ★ **Business Study:** ಆಂಗ್ಲ ಭಾಷೆಯ **Busigness/Busy :** ಕಾಳಜಿ/ಕೆಲಸ/ಕಾರ್ಯನಿರತನಾಗು

## ಪರಿವಿಡಿ


| ಕ್ರ. ಸಂ | ಇತಿಹಾಸ | ಪುಟ ಸಂಖ್ಯೆ |
|---|---|---|
| 01 | ಇತಿಹಾಸ ಪರಿಚಯ | 5–6 |
| 02 | ನಮ್ಮ ಕರ್ನಾಟಕ | 6–11 |
| 03 | ಆರಂಭಿಕ ಸಮಾಜ | 11–14 |
| 04 | ಪ್ರಾಚೀನ ನಾಗರಿಕತೆಗಳು | 14–17 |
| 05 | ವೇದ ಕಾಲದ ಸಂಸ್ಕೃತಿ | 17–18 |
| 06 | ಕ್ರೈಸ್ತಧರ್ಮ ಮತ್ತು ಇಸ್ಲಾಂಧರ್ಮ | 18–19 |
| 07 | ಹೊಸ ಧರ್ಮಗಳ ಉದಯ | 19–20 |
| 08 | ಉತ್ತರ ಭಾರತದ ಪ್ರಮುಖ ರಾಜಮನೆತನಗಳು | 21–24 |
| | ಪೌರನೀತಿ | |
| 09 | ಪೌರತ್ವ | 24–25 |
| 10 | ರಾಷ್ಟ್ರೀಯ ಚಿಹ್ನೆಗಳು ಮತ್ತು ರಾಷ್ಟ್ರೀಯ ಭಾವೈಕ್ಯತೆ | 25 |
| | ಭೂಗೋಳ ವಿಜ್ಞಾನ | |
| 11 | ಗ್ಲೋಬ್ ಮತ್ತು ನಕಾಶೆಗಳು | 25–26 |
| 12 | ಏಷ್ಯಾ – ವೈಪರೀತ್ಯಗಳ ಖಂಡ | 26–28 |

| ಕ್ರ. ಸಂ. | ಇತಿಹಾಸ | ಪುಟ ಸಂಖ್ಯೆ |
|---|---|---|
| 01 | ನಮ್ಮ ಕರ್ನಾಟಕ (ಮುಂದುವರೆದ ಭಾಗ) | 29–33 |
| 02 | ದಕ್ಷಿಣ ಭಾರತದ ಪ್ರಮುಖ ರಾಜಮನೆತನಗಳು | 34–37 |
| 03 | ಕೊಡಗು, ಕಿತ್ತೂರು, ತುಳುನಾಡು ಮತ್ತು ಹೈದರಾಬಾದ್ ಕರ್ನಾಟಕ | 38–40 |
| 04 | ಮತ ಪ್ರವರ್ತಕರು ಮತ್ತು ಸಮಾಜ ಸುಧಾರಕರು | 40–41 |
| 05 | ಭಾರತದ ಇತಿಹಾಸದಲ್ಲಿ ರಜಪೂತರು | 41–42 |
| | ಪೌರನೀತಿ | |
| 06 | ಪ್ರಭುತ್ವ | 43 |
| 07 | ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ನ್ಯಾಯಾಂಗ | 43–44 |
| 08 | ಮಾನವ ಹಕ್ಕುಗಳು | 44–45 |
| | ಭೂಗೋಳ ವಿಜ್ಞಾನ | |
| 09 | ಯೂರೋಪ್ – ಏಷ್ಯಾದ ಪರ್ಯಾಯದ್ವೀಪ | 45–46 |
| 10 | ಆಫ್ರಿಕಾ – ಕೇಂದ್ರೀಯ ಭೂಖಂಡ | 46–48 |


## ಅಧ್ಯಾಯ 1: ಇತಿಹಾಸ ಪರಿಚಯ

### ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.

1. ಇತಿಹಾಸದ ಪಿತಾಮಹ__________ : **ಉತ್ತರ: ಹೆರೊಡೋಟಸ್**

2. ದಿ ಏಷ್ಯಾಟಿಕ್ ಸೊಸೈಟಿಯನ್ನು ಸ್ಥಾಪಿಸಿದವರು__________ : **ಉತ್ತರ: ಸರ್. ವಿಲಿಯಂಜೋನ್ಸ್**

### ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

**1. ಇತಿಹಾಸ ಎಂದರೇನು?**

**ಉತ್ತರ:** ಈ ಹಿಂದೆ ನಡೆದು ಹೋದ ಸಂಗತಿಗಳನ್ನು ಕ್ರಮಬದ್ಧವಾಗಿ ಹೇಳುವುದೇ ಇತಿಹಾಸ.

**2. ಇತಿಹಾಸ ಪಿತಾಮಹ ಯಾರು? ಅವರು ಯಾವ ದೇಶದವರು?**

**ಉತ್ತರ:** 'ಇತಿಹಾಸದ ಪಿತಾಮಹ' ಹೆರೊಡೋಟಸ್. ಗ್ರೀಕ್ ದೇಶದವರು

**3. 'ಆಧಾರವಿಲ್ಲದೆ ಇತಿಹಾಸವಿಲ್ಲ' ಏಕೆ?**

**ಉತ್ತರ:** ಇತಿಹಾಸಕಾರರು ಇತಿಹಾಸವನ್ನು ನಿರ್ದಿಷ್ಟವಾಗಿ ಮತ್ತು ಖಚಿತವಾಗಿ ಹೇಳಲು ಸಾಕ್ಷ್ಯಾಧಾರಗಳನ್ನು ಬಳಸಿಕೊಳ್ಳುತ್ತಾರೆ. ಆದ್ದರಿಂದ 'ಆಧಾರವಿಲ್ಲದೆ ಇತಿಹಾಸವಿಲ್ಲ' ಎಂದು ಹೇಳಲಾಗುವುದು.

**4. ಇತಿಹಾಸದ ಆಧಾರಗಳನ್ನು ಪಟ್ಟಿ ಮಾಡಿ.**

**ಉತ್ತರ:** ಇತಿಹಾಸದ ಆಧಾರಗಳನ್ನು ಸಾಹಿತ್ಯ ಆಧಾರಗಳು ಮತ್ತು ಪುರಾತತ್ವ ಆಧಾರಗಳು ಎಂದು ವಿಭಾಗಿಸಲಾಗಿದೆ. ಅವುಗಳೆಂದರೆ

ದೇಶಸಾಹಿತ್ಯ, ವಿದೇಶಿಸಾಹಿತ್ಯ, ಲಾವಣಿ, ಜಾನಪದ ಕಥೆಗಳು, ಐತಿಹ್ಯಗಳು ಸ್ಮಾರಕಗಳು, ನಾಣ್ಯಗಳು, ಶಾಸನಗಳು, ಇತರ ಅವಶೇಷಗಳು.

**5. ಪುರಾತತ್ವ ಆಧಾರ ಎಂದರೇನು?**

**ಉತ್ತರ:** ಹಿಂದಿನ ಮಾನವರು ನಿರ್ಮಿಸಿದ ಮತ್ತು ಬಳಸಿದ ಭೌತಿಕ ವಸ್ತುಗಳ ಅವಶೇಷಗಳೇ ಪುರಾತತ್ವ ಆಧಾರಗಳು.

**6. ಭಾರತೀಯಶಾಸ್ತ್ರವನ್ನು ಕುರಿತು ಅಧ್ಯಯನ ನಡೆಸಿದ ಇತಿಹಾಸಕಾರರನ್ನು ಹೆಸರಿಸಿ.**

**ಉತ್ತರ:** ಭಾರತೀಯ ಶಾಸ್ತ್ರವನ್ನು ಕುರಿತು ಅಧ್ಯಯನ ನಡೆಸಿದ ಇತಿಹಾಸಕಾರರೆಂದರೇ ಸರ್. ವಿಲಿಯಂ ಜೋನ್ಸ್, ಜೇಮ್ಸ್‌ಮಿಲ್,

ಮ್ಯಾಕ್ಸ್‌ಮುಲ್ಲರ್ ಅಬೆ ಡುಬಾಯ್ಸ್, ಎಲ್ಫಿನ್‌ಸ್ಟನ್, ಕೋಲ್ ಬ್ರೂಕ್, ಕನ್ನಿಂಗ್‌ಹ್ಯಾಮ್, ಇಲಿಯೆಟ್ ಡಾಸನ್.

**ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿ.**

**1. ಅಬೆ ಡುಬಾಯ್ಸ್ ಕುರಿತು ಟಿಪ್ಪಣಿ ಬರೆಯಿರಿ.**

**ಉತ್ತರ:** ಅಬೆ ಡುಬಾಯ್ಸ್ ಎಂಬ ಫ್ರೆಂಚ್ ಮಿಷನರಿ ಶ್ರೀರಂಗಪಟ್ಟಣ ಬಳಿಯ ಗಂಜಾಂಗೆ ಬಂದು ನೆಲೆಸಿದರು. ಸ್ಥಳೀಯ ಸಂಸ್ಕೃತಿಯನ್ನು ಅಳವಡಿಸಿಕೊಂಡು ಸನ್ಯಾಸಿಯಂತೆ ಬದುಕಿದ ಇವರನ್ನು ಜನರು 'ದೆ ೂಡ್ಡಸ್ವಾಮಿಯವರು' ಎಂದು ಕರೆಯುತ್ತಿದ್ದರು. ಇವರು 'ಹಿಂದೂ ಮ್ಯಾನೆರ್ಸ್, ಕಸ್ಟಮ್ಸ್ ಅಂಡ್ ಸೆರೆಮನಿಸ್' ಎಂಬ ಕೃತಿಯನ್ನು ಬರೆದರು. ಇದರಲ್ಲಿ ಭಾರತೀಯರ ಆಚಾರ, ವಿಚಾರ, ಹಬ್ಬ ಹರಿದಿನ, ವರ್ಣಾಶ್ರಮ ವ್ಯವಸ್ಥೆ ಮೊದಲಾದವುಗಳನ್ನು ಕುರಿತು ಬರೆದಿದ್ದಾರೆ. 24 ವರ್ಷಗಳ ಕಾಲ ಇಲ್ಲಿಯೇ ನೆಲೆಸಿದ್ದ ಅಬೆ ಡುಬಾಯ್ಸ್ ಆನಂತರ ಫ್ರಾನ್ಸಿಗೆ ಹಿಂತಿರುಗಿದರು.

**ಕೆಳಗಿನ 'ಎ' ಪಟ್ಟಿ ಮತ್ತು 'ಬಿ' ಪಟ್ಟಿಯಲ್ಲಿನ ವಿಷಯಗಳನ್ನು ಹೊಂದಿಸಿ ಬರೆಯಿರಿ.**

| ಎ | ಬಿ | ಉತ್ತರ: |
|---|---|---|
| ಕಾಳಿದಾಸ | ಹಿಸ್ಟರಿ ಆಫ್ ಇಂಡಿಯಾ | ಶಾಕುಂತಲ. |
| ಮ್ಯಾಕ್ಸ್ ಮುಲ್ಲರ್ | ದಿ ಏಷ್ಯಾಟಿಕ್ ಸೊಸೈಟಿ | ಸೇಕ್ರೆಡ್ ಬುಕ್ ಆಫ್ ದಿ ಈಸ್ಟ್ |
| ಜೇಮ್ಸ್ ಮಿಲ್ | ಸೇಕ್ರೆಡ್ ಬುಕ್ ಆಫ್ | ದಿ ಈಸ್ಟ್ ಹಿಸ್ಟರಿ ಆಫ್ ಇಂಡಿಯಾ |
| ವಿಲಿಯಂ ಜೋನ್ಸ್ | ಶಾಕುಂತಲ. | ದಿ ಏಷ್ಯಾಟಿಕ್ ಸೊಸೈಟಿ |

## ಅಧ್ಯಾಯ 2: ನಮ್ಮ ಕರ್ನಾಟಕ
## ಬೆಂಗಳೂರು ವಿಭಾಗ

**ಪ್ರಶ್ನೆಗಳು ಮತ್ತು ಉತ್ತರಗಳು:**

**ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**1. ಪ್ರಾಚೀನ ಕಾಲದಲ್ಲಿ ಕರ್ನಾಟಕವನ್ನು ಆಳಿದ ಮೂರು ರಾಜ ಮನೆತನಗಳು ಯಾವುವು?**

**ಉತ್ತರ:** ಪ್ರಾಚೀನ ಕಾಲದಲ್ಲಿ ಕರ್ನಾಟಕವನ್ನು ಆಳಿದ ಮೂರು ರಾಜ ಮನೆತನಗಳು ಗಂಗರು ,ಹೊಯ್ಸಳರು, ವಿಜಯ ನಗರ ಸಾಮ್ರಾಜ್ಯ.

**2. ಬೆಂಗಳೂರು ವಿಭಾಗದಲ್ಲಿ ಎಷ್ಟು ಜಿಲ್ಲೆಗಳಿವೆ?**

**ಉತ್ತರ:** ಬೆಂಗಳೂರು ವಿಭಾಗದಲ್ಲಿ 9 ಜಿಲ್ಲೆಗಳಿವೆ

**3. ಬೆಂಗಳೂರು ವಿಭಾಗವನ್ನು ಆಳಿದ ಎರಡು ಪಾಳೆಪಟ್ಟುಗಳ ಹೆಸರನ್ನು ಬರೆಯಿರಿ.**

**ಉತ್ತರ: 1.**ಕೆಳದಿ ನಾಯಕ 2. ಚಿತ್ರದುರ್ಗ ಪಾಳೆಪಟ್ಟು, 3.ಯಲಹಂಕ ಪಾಳೆಪಟ್ಟು, 4.ಚಿಕ್ಕಬಳ್ಳಾಪುರ

**ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**1. ಪ್ರಾಕೃತಿಕ ಸಂಪನ್ಮೂಲ ಎಂದರೇನು? ಉದಾಹರಣೆ ನೀಡಿ.**

**ಉತ್ತರ:** ಪ್ರಕೃತಿಯಿಂದ ದತ್ತವಾದ ಸಂಗತಿಗಳನ್ನು ಪ್ರಾಕೃತಿಕ ಸಂಪನ್ಮೂಲ ಎಂದು ಕರೆಯುತ್ತೇವೆ.

**ಉದಾಹರಣೆ:** ನದಿ, ಕಾಡು, ಕಣಿವೆ,

ಜಲಪಾತಗಳು, ಖನಿಜ ಗಣಿಗಳು, ವನ್ಯಮೃಗಗಳು, ಮಣ್ಣು

**2. ಬೆಂಗಳೂರು ವಿಭಾಗದಲ್ಲಿ ಅತಿ ಹೆಚ್ಚು ಮಳೆ ಬೀಳುವ ಜಿಲ್ಲೆ ಯಾವುದು?**

**ಉತ್ತರ:** ಬೆಂಗಳೂರು ವಿಭಾಗದಲ್ಲಿ ಅತಿ ಹೆಚ್ಚು ಮಳೆ ಬೀಳುವ ಜಿಲ್ಲೆ ಶಿವಮೊಗ್ಗ

**3. ಬೆಂಗಳೂರು ವಿಭಾಗದಲ್ಲಿ ಕುಡಿಯುವ ನೀರಿಗೆ ಅಭಾವ ಉಂಟಾಗಲು ಕಾರಣಗಳೇನು?**

**ಉತ್ತರ:** ಬೆಂಗಳೂರು ನಗರ ಜಿಲ್ಲೆಯ ಅನೇಕ ನದಿಗಳು ನಾಶದ ಅಂಚನ್ನು ತಲುಪಿವೆ. ಅನೇಕ ಕೆರೆಗಳು ಭೂ ಆಕ್ರಮಣದಿಂದ

ನಾಶವಾಗುತ್ತಿವೆ. ಇದರಿಂದಾಗಿ ನೀರಿನ ತೀವ್ರ ಅಭಾವ ಉಂಟಾಗುತ್ತಿದೆ.

**4. ಬೆಂಗಳೂರು ವಿಭಾಗದ ಎರಡು ಜಲಪಾತಗಳ ಹೆಸರನ್ನು ಬರೆಯಿರಿ.**

**ಉತ್ತರ:** ಬೆಂಗಳೂರು ವಿಭಾಗದ ಎರಡು ಜಲಪಾತ ಜೋಗಜಲಪಾತ ಮುತ್ಯಾಲಮಡು

**ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**1. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ಯಾವ ಜಿಲ್ಲೆಯಲ್ಲಿದೆ?**

**ಉತ್ತರ:** ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ಬೆಂಗಳೂರು ಜಿಲ್ಲೆಯಲ್ಲಿದೆ

**2. ಬೆಂಗಳೂರು ವಿಭಾಗದಲ್ಲಿರುವ ಅತಿ ಎತ್ತರದ ಗುಡ್ಡದ ಹೆಸರನ್ನು ಬರೆಯಿರಿ.**

**ಉತ್ತರ:** ಬೆಂಗಳೂರು ವಿಭಾಗದಲ್ಲಿರುವ ಅತಿ ಎತ್ತರದ ಗುಡ್ಡದ ಹೆಸರೇನೆಂದರೆ ಹಾಲುರಾಮೇಶ್ವರ ಗುಡ್ಡ.

**3. ಬೆಂಗಳೂರು ವಿಭಾಗದಲ್ಲಿರುವ ಎರಡು ಪಕ್ಷಿಧಾಮಗಳ ಹೆಸರನ್ನು ತಿಳಿಸಿ.**

**ಉತ್ತರ:** ಗುಡವಿ ಪಕ್ಷಿಧಾಮ, ಮಂಡಗದ್ದೆ ಪಕ್ಷಿಧಾಮ ಬೆಂಗಳೂರು ವಿಭಾಗದಲ್ಲಿರುವ ಎರಡು ಪಕ್ಷಿಧಾಮಗಳಾಗಿವೆ.

**4. ರಾಮನಗರ ಜಿಲ್ಲೆಯಲ್ಲಿರುವ ಪಕ್ಷಿಧಾಮದಲ್ಲಿ ಯಾವ ಪಕ್ಷಿಯನ್ನು ರಕ್ಷಿಸಲಾಗುತ್ತಿದೆ?**

**ಉತ್ತರ:** ರಾಮನಗರ ಜಿಲ್ಲೆಯಲ್ಲಿರುವ ಪಕ್ಷಿಧಾಮದಲ್ಲಿ ರಣಹದ್ದು ಪಕ್ಷಿಯನ್ನು ರಕ್ಷಿಸಲಾಗುತ್ತಿದೆ

**ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**1. ಬೆಂಗಳೂರು ವಿಭಾಗದಲ್ಲಿನ ಪ್ರಮುಖ ಆಹಾರ ಬೆಳೆಗಳು ಯಾವುವು?**

**ಉತ್ತರ:** ಬೆಂಗಳೂರು ವಿಭಾಗದಲ್ಲಿನ ಪ್ರಮುಖ ಆಹಾರ ಬೆಳೆಗಳು ರಾಗಿ, ಮೆಕ್ಕೆ ಜೋಳ, ಭತ್ತ, ಕಡಲೆಕಾಯಿ, ಬೇಳೆಕಾಳು

**2. ಹಿಪ್ಪುನೇರಳೆ ಎಲೆಯು ಯಾವ ಉದ್ದಿಮೆಗೆ ಕಚ್ಚಾ ಸಾಮಗ್ರಿಯಾಗಿದೆ?**

**ಉತ್ತರ:** ಹಿಪ್ಪುನೇರಳೆ ಎಲೆಯು ರೇಷ್ಮೆ ಉದ್ದಿಮೆಗೆ ಕಚ್ಚಾ ಸಾಮಗ್ರಿಯಾಗಿದೆ

**3. ಭದ್ರಾವತಿಯಲ್ಲಿರುವ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆಯನ್ನು ಯಾವ ವರ್ಷ ಆರಂಭಿಸಲಾಯಿತು?**

**ಉತ್ತರ:** ಭದ್ರಾವತಿಯಲ್ಲಿರುವ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆಯನ್ನು 1923ರಲ್ಲಿ ಆರಂಭಿಸಲಾಯಿತು

**4. ಬೆಂಗಳೂರು ವಿಭಾಗದಲ್ಲಿ ಯಾವ ಸ್ಥಳಗಳಲ್ಲಿ ಸಿದ್ಧ ಉಡುಪು ಪಾರ್ಕುಗಳನ್ನು ಸ್ಥಾಪಿಸಲಾಗಿದೆ?**

**ಉತ್ತರ:** ಬೆಂಗಳೂರು ವಿಭಾಗದಲ್ಲಿ ದೊಡ್ಡಬಳ್ಳಾಪುರ, ಆನೇಕಲ್ ಮುಂತಾದ ನಗರಗಳಲ್ಲಿ ಸರ್ಕಾರ ಸಿದ್ಧ ಉಡುಪಿನ ಪಾರ್ಕುಗಳನ್ನು ಸ್ಥಾಪಿಸಿದೆ.

**ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**1. ಜ್ಞಾನಪೀಠ ಪ್ರಶಸ್ತಿ ಪಡೆದ ಬೆಂಗಳೂರು ವಿಭಾಗಕ್ಕೆ ಸೇರಿದ ಮೂವರು ಸಾಹಿತಿಗಳ ಹೆಸರುಗಳನ್ನು**

ಬರೆಯಿರಿ.

**ಉತ್ತರ:** ರಾಷ್ಟ್ರಕವಿ ಕುವೆಂಪು ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮತ್ತು ಡಾ. ಯು.ಆರ್. ಅನಂತಮೂರ್ತಿ.

**2. ಪ್ರಸಿದ್ಧ ಜಾನಪದ ಮ್ಯೂಸಿಯಂ 'ಜಾನಪದ ಲೋಕ'ವನ್ನು ಸ್ಥಾಪಿಸಿದವರಾರು?**

**ಉತ್ತರ:** ಎಚ್.ಎಲ್. ನಾಗೇಗೌಡ

**3. ಬೆಂಗಳೂರು ನಗರದಲ್ಲಿ ಪ್ರತಿ ವರ್ಷ ನಡೆಯುವ ಪ್ರಸಿದ್ಧ ಉತ್ಸವ ಯಾವುದು?**

**ಉತ್ತರ:** ಕರಗ

**ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**1. ಶಿವಮೊಗ್ಗ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿದ್ದ ರೋಗದ ಹೆಸರೇನು?**

**ಉತ್ತರ:** ಶಿವಮೊಗ್ಗ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿದ್ದ ರೋಗದ ಹೆಸರು ಮಂಗನ ಕಾಯಿಲೆ

**2. ಭಾರತರತ್ನ ಪ್ರಶಸ್ತಿ ಪಡೆದ ಬೆಂಗಳೂರು ವಿಭಾಗದ ಇಬ್ಬರ ಹೆಸರನ್ನು ಬರೆಯಿರಿ.**

**ಉತ್ತರ:** ಸರ್. ಎಂ. ವಿಶ್ವೇಶ್ವರಯ್ಯ ಮತ್ತು ಸಿ.ಎನ್.ಆರ್.ರಾವ್.

**3. ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರ ಸ್ಥಾಪಿಸುವ ಆಸ್ಪತ್ರೆ ಕೇಂದ್ರಗಳನ್ನು ಏನೆಂದು ಕರೆಯಲಾಗುತ್ತದೆ?**

**ಉತ್ತರ:** ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಆರೋಗ್ಯ ಕೇಂದ್ರಗಳು ಮತ್ತು ಆರೋಗ್ಯ ಉಪಕೇಂದ್ರಗಳು ಎಂದು ಕರೆಯಲಾಗುತ್ತದೆ.

**ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**1. ಮೈಸೂರು ರಾಜ್ಯದ ಪ್ರಥಮ ಮುಖ್ಯಮಂತ್ರಿಯ ಹೆಸರನ್ನು ಬರೆಯಿರಿ.**

**ಉತ್ತರ:** ಮೈಸೂರು ರಾಜ್ಯದ ಪ್ರಥಮ ಮುಖ್ಯಮಂತ್ರಿ ಕೆ. ಸಿ. ರೆಡ್ಡಿ

**2. ಇಬ್ಬರು ಕರ್ನಾಟಕ ಏಕೀಕರಣದ ರೂವಾರಿಗಳ ಹೆಸರನ್ನು ಬರೆಯಿರಿ.**

**ಉತ್ತರ:** ಕೆಂಗಲ್ ಹನುಮಂತಯ್ಯ ಮತ್ತು ಎಸ್ ನಿಜಲಿಂಗಪ್ಪ

**ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ.**

**1. ಬೆಂಗಳೂರು ವಿಭಾಗದಲ್ಲಿ ಎಷ್ಟು ಜಿಲ್ಲೆಗಳಿವೆ?**

**ಉತ್ತರ:** ಬೆಂಗಳೂರು ವಿಭಾಗದಲ್ಲಿ 9 ಜಿಲ್ಲೆಗಳಿವೆ

**2. ದಕ್ಷಿಣ ಭಾರತದ ಅತಿ ದೊಡ್ಡ ಕೆರೆ ಶಾಂತಿಸಾಗರ ಯಾವ ಜಿಲ್ಲೆಯಲ್ಲಿದೆ?**

**ಉತ್ತರ:** ದಕ್ಷಿಣ ಭಾರತದ ಅತಿ ದೊಡ್ಡ ಕೆರೆ ಶಾಂತಿಸಾಗರ ದಾವಣಗೆರೆ ಚನ್ನಗಿರಿಯಲ್ಲಿದೆ.

**3. ಬೆಂಗಳೂರು ವಿಭಾಗದಲ್ಲಿ ಅತಿ ಹೆಚ್ಚು ಕಾಡು ಇರುವ ಜಿಲ್ಲೆ ಯಾವುದು?**

**ಉತ್ತರ:** ಬೆಂಗಳೂರು ವಿಭಾಗದಲ್ಲಿ ಅತಿ ಹೆಚ್ಚು ಕಾಡು ಇರುವ ಜಿಲ್ಲೆ ಶಿವಮೊಗ್ಗ

**4. ರಾಷ್ಟ್ರಕವಿ ಕುವೆಂಪು ಹೆಸರಿನ ವಿಶ್ವವಿದ್ಯಾಲಯ ರಾಜ್ಯದಲ್ಲಿ ಯಾವ ಜಿಲ್ಲೆಯಲ್ಲಿದೆ?**

**ಉತ್ತರ:** ಕರ್ನಾಟಕ ರಾಜ್ಯ, ಶಿವಮೊಗ್ಗ ಜಿಲ್ಲೆಯ ಶಂಕರಘಟ್ಟದಲ್ಲಿದೆ.

## ಮೈಸೂರು ವಿಭಾಗ:

**I. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**1. ಮೈಸೂರು ವಿಭಾಗದಲ್ಲಿ ಇಂದು ಎಷ್ಟು ಜಿಲ್ಲೆಗಳಿವೆ?**

**ಉತ್ತರ:** ಮೈಸೂರು ವಿಭಾಗದಲ್ಲಿ ಇಂದು 8 ಜಿಲ್ಲೆಗಳಿವೆ

**2. ಮೈಸೂರು ಎಂಬ ಹೆಸರು ಬರಲು ಕಾರಣವನ್ನು ತಿಳಿಸಿ.**

**ಉತ್ತರ:** ಪುರಾಣ ಕಥೆಯ ಪ್ರಕಾರ ದೇವಿ ಪಾರ್ವತಿಯು ಚಾಮುಂಡೇಶ್ವರಿ ರೂಪ ಧರಿಸಿ

ಮಹಿಷಾಸುರನನ್ನು ಕೊಂದಳು. ಮಹಿಷಾಸುರನನ್ನು ಕೊಂದ ಸ್ಥಳವೇ ಮಹಿಷನಾಡು, ಮೈಸೂರು ಎಂದು ರೂಪಾಂತರ ಹೊಂದಿತು.

**3. ಮೈಸೂರು ಸಂಸ್ಥಾನದ ಬೆಳವಣಿಗೆಗೆ 20ನೆಯ ಶತಮಾನದ ಆದಿ ಭಾಗದಲ್ಲಿ ಕಾರಣರಾದ ಒಡೆಯರ್ ಹೆಸರನ್ನು ಬರೆಯಿರಿ.**

**ಉತ್ತರ:** ನಾಲ್ವಡಿ ಕೃಷ್ಣರಾಜ ಒಡೆಯರ್

**4. ಕರಾವಳಿ ಪ್ರದೇಶವನ್ನು ಬ್ರಿಟಿಷರು ಮೊದಲು ಏನೆಂದು ಕರೆದರು?**

**ಉತ್ತರ:** ಕರಾವಳಿ ಪ್ರದೇಶವನ್ನು ಬ್ರಿಟಿಷರು ಮೊದಲು ಕೆನರ ಎಂದು ಕರೆದರು

## II. ಖಾಲಿ ಜಾಗಗಳನ್ನು ಭರ್ತಿ ಮಾಡಿ.

1. ದಕ್ಷಿಣ ಕನ್ನಡ ಜಿಲ್ಲೆಯನ್ನು ವಿಭಜಿಸಿ ---------- ವರ್ಷ ಉಡುಪಿ ಜಿಲ್ಲೆಯನ್ನು ರಚಿಸಲಾಯಿತು.

**ಉತ್ತರ: 1997**

2. ಮೈಸೂರು ವಿಭಾಗದ ------------ ಮತ್ತು --------------- ಕರಾವಳಿ ಜಿಲ್ಲೆಗಳು

**ಉತ್ತರ: ಉಡುಪಿ ಮತ್ತು ದಕ್ಷಿಣ ಕನ್ನಡ**

### ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

**1. ಮೈಸೂರು ವಿಭಾಗದ ಎರಡು ಪ್ರಸಿದ್ಧ ನದಿಗಳ ಹೆಸರು ಬರೆಯಿರಿ.**

**ಉತ್ತರ:** ಮೈಸೂರು ವಿಭಾಗದ ಎರಡು ಪ್ರಸಿದ್ಧ ನದಿಗಳ ಹೆಸರು ಕಾವೇರಿ, ಹೇಮಾವತಿ, ಹಾರಂಗಿ,

**2. ಮೈಸೂರು ವಿಭಾಗದ ಜಿಲ್ಲೆಗಳಲ್ಲಿ ಅತಿ ಹೆಚ್ಚು ಮಳೆ ಬೀಳುವ ಜಿಲ್ಲೆ ಹಾಗೂ ಅತಿ ಕಡಿಮೆ ಮಳೆ ಬೀಳುವ ಜಿಲ್ಲೆ ಯಾವುದು?**

**ಉತ್ತರ:** ಅತಿ ಹೆಚ್ಚು ಮಳೆ ಬೀಳುವ ಜಿಲ್ಲೆ ಹಾಗೂ ಅತಿ ಕಡಿಮೆ ಮಳೆ ಬೀಳುವ ಜಿಲ್ಲೆ ಮಂಡ್ಯ

**3. ಮೈಸೂರು ವಿಭಾಗದ ಜಿಲ್ಲೆಗಳಲ್ಲಿ ದೊರೆಯುವ ಎರಡು ಖನಿಜಗಳ ಹೆಸರನ್ನು ಬರೆಯಿರಿ.**

**ಉತ್ತರ:** ಬಾಕ್ಸೈಟ್, ಫೆಲ್‌ಸ್ಪೈಟ್, ಕ್ರೋಮೈಟ್, ಸುಣ್ಣಕಲ್ಲು,

**4. ಮೈಸೂರು ವಿಭಾಗದ ಕರಾವಳಿ ಜಿಲ್ಲೆಗಳಲ್ಲಿ ಜನರ ಮುಖ್ಯ ಉದ್ಯೋಗವೇನು?**

**ಉತ್ತರ:** ಮೈಸೂರು ವಿಭಾಗದ ಕರಾವಳಿ ಜಿಲ್ಲೆಗಳಲ್ಲಿ ಜನರ ಮುಖ್ಯ ಉದ್ಯೋಗ ಮೀನುಗಾರಿಕೆ

## I. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

**1. ಮೈಸೂರು ವಿಭಾಗದಲ್ಲಿರುವ ಎರಡು ಪ್ರಸಿದ್ಧ ಅರಣ್ಯ ಪ್ರದೇಶಗಳಾವುವು?**

**ಉತ್ತರ:** ಮೈಸೂರು ವಿಭಾಗದಲ್ಲಿರುವ ಎರಡು ಪ್ರಸಿದ್ಧ ಅರಣ್ಯ ಪ್ರದೇಶ ಬಂಡೀಪುರ, ನಾಗರಹೊಳೆ.

**2. ಮೈಸೂರು ವಿಭಾಗದ ಜಿಲ್ಲೆಗಳಲ್ಲಿ ನೆಲೆಸಿರುವ ಎರಡು ಬುಡಕಟ್ಟು ಸಮುದಾಯಗಳ ಹೆಸರನ್ನು ಬರೆಯಿರಿ**

**ಉತ್ತರ:** ಮೈಸೂರು ವಿಭಾಗದ ಜಿಲ್ಲೆಗಳಲ್ಲಿ ನೆಲೆಸಿರುವ ಎರಡು ಬುಡಕಟ್ಟು ಸಮುದಾಯ ಜೇನುಕುರುಬರು ಮತ್ತು ಕೊರಗ ಬುಡಕಟ್ಟು .

**3. ಎರಡು ಪಕ್ಷಿಧಾಮ ಮತ್ತು ಎರಡು ವನ್ಯಮೃಗಧಾಮಗಳ ಹೆಸರನ್ನು ಬರೆಯಿರಿ.**

**ಉತ್ತರ:** ರಂಗನತಿಟ್ಟು ಪಕ್ಷಿಧಾಮ, ಗುಡವಿ ಪಕ್ಷಿಧಾಮ, ಕೊಕ್ಕರೆ ಬೆಳ್ಳೂರು ಮುಖ್ಯ ಪಕ್ಷಿಧಾಮಗಳಾದರೆ ಮೇಲುಕೋಟೆ ವನ್ಯಮೃಗಧಾಮ, ಕಾವೇರಿ ವನ್ಯಮೃಗಧಾಮ, ಮಲೈಮಹದೇಶ್ವರ ವನ್ಯಮೃಗಧಾಮ.

## II. ಖಾಲಿ ಜಾಗವನ್ನು ಭರ್ತಿ ಮಾಡಿ.

1. ನಮ್ಮ ರಾಷ್ಟ್ರೀಯ ಪ್ರಾಣಿ -------. **ಉತ್ತರ: ಹುಲಿ**

2. ಕಾಡಾನೆಗಳನ್ನು ಪಳಗಿಸುವ ವಿಧಾನವನ್ನು -------- ಎಂದು ಕರೆಯುತ್ತಾರೆ. **ಉತ್ತರ: ಖೆಡ್ಡ**

## I. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

**1. ಮೈಸೂರು ವಿಭಾಗದಲ್ಲಿರುವ ಎರಡು ರಾಷ್ಟ್ರೀಯ ಉದ್ಯಾನಗಳನ್ನು ಹೆಸರಿಸಿ.**

**ಉತ್ತರ:** ರಾಜೀವ ಗಾಂಧಿ ನಾಗರಹೊಳೆ ರಾಷ್ಟ್ರೀಯ ಉದ್ಯಾನ ಮತ್ತು ಬಂಡೀಪುರ ರಾಷ್ಟ್ರೀಯ ಉದ್ಯಾನ ಈ ವಿಭಾಗದಲ್ಲಿರುವ ಎರಡು
ರಾಷ್ಟ್ರೀಯ ಉದ್ಯಾನಗಳಾಗಿವೆ.

**2. ಮೈಸೂರು ವಿಭಾಗದ ಆಯ್ದ ಆರು ಮುಖ್ಯ ಬೆಳೆಗಳನ್ನು ತಿಳಿಸಿ.**

**ಉತ್ತರ:** ಮುಖ್ಯ ಬೆಳೆಗಳೆಂದರೆ ಭತ್ತ, ರಾಗಿ, ಜೋಳ, ಅವರೆ, ಹೆಸರು, ಉದ್ದು ಮುಂತಾದವು.

**3. ಮೈಸೂರು ವಿಭಾಗದಲ್ಲಿ ಕೃಷಿಗೆ ನೀರಾವರಿ ಒದಗಿಸುವ ಎರಡು ನೀರಾವರಿ ಯೋಜನೆಗಳಾವುವು?**

**ಉತ್ತರ:** ಅವುಗಳಾವುವೆಂದರೆ ಕೃಷ್ಣರಾಜಸಾಗರ, ಹಾರಂಗಿ, ಹೇಮಾವತಿ ಮತ್ತು ಕಬಿನಿ ನೀರಾವರಿ ಯೋಜನೆಗಳು.

**4. ಮೈಸೂರು ವಿಭಾಗದಲ್ಲಿರುವ ಮೂರು ಮುಖ್ಯ ಉದ್ದಿಮೆಗಳನ್ನು ಹೆಸರಿಸಿ.**

**ಉತ್ತರ:** ಔಷಧಿ ಕಾರ್ಖಾನೆಗಳು, ಕಾಫಿ ಕ್ಯೂರಿಂಗ್ ಉದ್ದಿಮೆಗಳು, ಆಹಾರ ಸಂಸ್ಕರಣಾ ಘಟಕಗಳು,

## II. ಖಾಲಿ ಜಾಗವನ್ನು ಭರ್ತಿ ಮಾಡಿ.

1. ಮೈಸೂರು ವಿಭಾಗದ ---------------- ಜಿಲ್ಲೆಯಲ್ಲಿ ಅತಿ ಹೆಚ್ಚಾಗಿ ಕಾಫಿ ಬೆಳೆಯುತ್ತಾರೆ.

**ಉತ್ತರ: ಚಿಕ್ಕಮಗಳೂರು**

### ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

**1. ಕೊಡವರು ಆಚರಿಸುವ ಸುಗ್ಗಿ ಹಬ್ಬದ ಹೆಸರೇನು?**

**ಉತ್ತರ:** ಕೊಡವರು ಆಚರಿಸುವ ಸುಗ್ಗಿ ಹಬ್ಬ ಹುತ್ತರಿ ಹಬ್ಬ

**2. ಕರ್ನಾಟಕ ಸರ್ಕಾರದ ನಾಟಕ ಸಂಸ್ಥೆ ರಂಗಾಯಣದ ಕೇಂದ್ರ ಸ್ಥಾನ ಯಾವ ನಗರದಲ್ಲಿದೆ?**

**ಉತ್ತರ:** ಕರ್ನಾಟಕ ಸರ್ಕಾರದ ನಾಟಕ ಸಂಸ್ಥೆ ರಂಗಾಯಣದ ಕೇಂದ್ರ ಸ್ಥಾನ ಮೈಸೂರು ನಗರದಲ್ಲಿದೆ.

**3. ಮೈಸೂರು ವಿಭಾಗದ ಇಬ್ಬರು ಇಂಗ್ಲೀಷ್ ಕಾದಂಬರಿಕಾರರ ಹೆಸರನ್ನು ಬರೆಯಿರಿ.**

**ಉತ್ತರ:** ಹಾಸನದ ರಾಜಾರಾವ್, ಆರ್. ಕೆ. ನಾರಾಯಣ್ ಪ್ರಸಿದ್ಧ **4. ಕನ್ನಡದ ಇಬ್ಬರು ಪ್ರಸಿದ್ಧ ಕಾದಂಬರಿಕಾರರ ಹೆಸರನ್ನು ಬರೆಯಿರಿ.**

**ಉತ್ತರ:** ಶಿವರಾಮ ಕಾರಂತ, ಡಾ. ಎಸ್. ಎಲ್ ಭೈರಪ್ಪ ಪೂರ್ಣಚಂದ್ರ ತೇಜಸ್ವಿಯವರು

### ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

**1. ಮೈಸೂರಿನಲ್ಲಿ ಶತಮಾನೋತ್ಸವ ಆಚರಿಸಿಕೊಳ್ಳುತ್ತಿರುವ ವಿಶ್ವವಿದ್ಯಾಲಯದ ಹೆಸರನ್ನು ಬರೆಯಿರಿ.**

**ಉತ್ತರ:** ಮೈಸೂರು ವಿಶ್ವವಿದ್ಯಾಲಯ

**2. ಗ್ರಾಮೀಣ ಪ್ರದೇಶದಲ್ಲಿ ಜನರಿಗೆ ಆರೋಗ್ಯ ಸೇವೆ ಒದಗಿಸುವ ಕೇಂದ್ರಗಳ ಹೆಸರೇನು?**

**ಉತ್ತರ:** ಗ್ರಾಮೀಣ ಪ್ರದೇಶದಲ್ಲಿ ಜನರಿಗೆ ಆರೋಗ್ಯ ಸೇವೆ ಒದಗಿಸುವ ಕೇಂದ್ರಗಳ ಹೆಸರು ಜಿಲ್ಲಾ ಆಸ್ಪತ್ರೆ ಮತ್ತು ಆರೋಗ್ಯ ಉಪಕೇಂದ್ರ

**3. ಎರಡು ಆರೋಗ್ಯ ಸೂಚಿಗಳನ್ನು ಹೆಸರಿಸಿ.**

**ಉತ್ತರ:** ಶಿಶು ಮರಣ ಪ್ರಮಾಣ ಕೆಳಮಟ್ಟದಲ್ಲಿದೆ. ಜನರ ಜೀವನ ಆಯುಷ್ಯ ಉತ್ತಮವಾಗಿದೆ, ತಾಯಂದಿರ ಮರಣ ಪೆಮಾಣ ಕೆಳಮಟ್ಟದಲ್ಲಿದೆ. ಇವೆಲ್ಲಾ ಜನರ ಆರೋಗ್ಯ ಸೂಚಿಗಳಾಗಿವೆ.

## I. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

**1. ಮೈಸೂರು ವಿಭಾಗಕ್ಕೆ ಸೇರಿದ ಇಬ್ಬರು ಪ್ರಸಿದ್ಧ ಇಂಗ್ಲೀಷ್ ಕಾದಂಬರಿಕಾರರ ಹೆಸರನ್ನು ಬರೆಯಿರಿ.**

**ಉತ್ತರ: ಉತ್ತರ:** ರಾಜಾರಾವ್ ಮತ್ತು ಆರ್ .ಕೆ ನಾರಾಯಣ್

**2. ಸ್ವಾತಂತ್ರ್ಯ ಹೋರಾಟದ ಜೊತೆಯಲ್ಲಿ ಅಸ್ಪೃಶ್ಯತಾ ನಿವಾರಣೆ ಚಳುವಳಿಯಲ್ಲಿ ತೊಡಗಿದ್ದ ಇಬ್ಬರು ಸಮಾಜ ಸುಧಾರಕರ ಹೆಸರು ಬರೆಯಿರಿ.**

**ಉತ್ತರ:** ಕುದ್ಮಲ್ ರಂಗರಾವ್ ಮತ್ತು ತಗಡೂರು ರಾಮಚಂದ್ರರಾವ್

**3. ಶ್ರವಣಬೆಳಗೊಳವು ಯಾವುದಕ್ಕೆ ಪ್ರಸಿದ್ಧಿಯಾಗಿದೆ?**

**ಉತ್ತರ:** ಶ್ರವಣಬೆಳಗೊಳವು ಏಕಶಿಲಾ ಬಾಹುಬಲಿ ಮೂರ್ತಿಗೆ ಪ್ರಸಿದ್ಧವಾಗಿದೆ

**4. ಮೈಸೂರು ಜಿಲ್ಲೆಗೆ ಸೇರಿದ ನಾಲ್ವರು ಸ್ವಾತಂತ್ರ್ಯ ಹೋರಾಟಗಾರರ ಹೆಸರನ್ನು ಬರೆಯಿರಿ.**

**ಉತ್ತರ:** ಎಸ್. ಸಿ ದಾಸಪ್ಪ, ಕಾರ್ನಾಡ್ ಸದಾಶಿವರಾವ್, ಎಚ್.ಕೆ. ವೀರಣ್ಣಗೌಡ, ಸಿ. ಎನ್. ಪೂರ್ಣಚ್ಚ.

## II. ಖಾಲಿ ಜಾಗ ಭರ್ತಿ ಮಾಡಿ.

1. ಕೊಡಗು ಜಿಲ್ಲೆಯ --------- ನಲ್ಲಿ ಕಾ ವೇರಿ ನದಿ ಹುಟ್ಟುತ್ತದೆ.

**ಉತ್ತರ: ತಲಕಾವೇರಿ**

2. ಕುದ್ಮಲ್ ರಂಗರಾವ್ ಅವರು ---------- ನಿವಾರಣೆಗಾಗಿ ಹೋರಾಟ ಮಾಡಿದರು.

**ಉತ್ತರ: ಅಸ್ಪೃಶ್ಯತೆಯ**

3. ಮೈಸೂರಿನಲ್ಲಿ ನಡೆಯುವ ವಿಶ್ವವಿಖ್ಯಾತ ಉತ್ಸವದ ಹೆಸರು------

**ಉತ್ತರ: ದಸರಾ ಉತ್ಸವ**

4. ಮೈಸೂರು ವಿಭಾಗದ --------- ಮತ್ತು --------- ಜಿಲ್ಲೆಗಳಲ್ಲಿ ಬಂದರುಗಳಿವೆ.

**ಉತ್ತರ: ಪಣಂಬೂರು ಮತ್ತು ನವಮಂಗಳೂರು**

### ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

**1. ಮೈಸೂರು ವಿಭಾಗದ ಜಿಲ್ಲೆಗಳಲ್ಲಿ ಬೆಳೆಯುವ ವಾಣಿಜ್ಯ ಬೆಳೆಗಳನ್ನು ಪಟ್ಟಿ ಮಾಡಿ.**

**ಉತ್ತರ:** ತಂಬಾಕು, ಕಾಫಿ, ಗೋಡಂಬಿ, ಅಡಕೆ, ಆಲೂಗಡ್ಡೆ, ಕಬ್ಬು, ಹತ್ತಿ, ಕಿತ್ತಳೆ, ತೆಂಗು

**2. ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳಲ್ಲಿರುವ ಎರಡು ಬಂದರುಗಳನ್ನು ಹೆಸರಿಸಿ.**

**ಉತ್ತರ:**. ಬಸರೂರು, ಮಲ್ಪೆ.

**3. ಮೈಸೂರು ವಿಭಾಗದ ಯಾವ ಯಾವ ಸ್ಥಳಗಳಲ್ಲಿ ಗೊಮ್ಮಟೇಶ್ವರ ವಿಗ್ರಹಗಳಿವೆ?**

**ಉತ್ತರ:** ಶ್ರವಣಬೆಳಗೊಳ, ಕಾರ್ಕಳ ಮತ್ತು ವೇಣೂರಿನಲ್ಲಿ ಗೊಮ್ಮಟೇಶ್ವರ ,ವಿಗ್ರಹಗಳಿವೆ.

# ಅಧ್ಯಾಯ –3 : ಆರಂಭಿಕ ಸಮಾಜ

### ಪ್ರಶ್ನೆಗಳು ಮತ್ತು ಉತ್ತರಗಳು:

## I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.

1. ಅಕ್ಷರಗಳ ಪರಿಚಯವಿಲ್ಲದ ಕಾಲಘಟ್ಟವನ್ನು______________ ಕಾಲ ಎನ್ನುತ್ತಾರೆ.

**ಉತ್ತರ: ಪ್ರಾಗೈತಿಹಾಸಿಕ**

2. ಸೂಕ್ಷ್ಮಶಿಲಾಯುಗವನ್ನು ___________ ಶಿಲಾಯುಗವೆಂದು ಕರೆಯಲಾಗುವುದು.

**ಉತ್ತರ: ಮಧ್ಯ**

3.ಭಾರತ ಉಪಖಂಡದಲ್ಲಿ ಕೃಷಿಯ ಆರಂಭಿಕ ಕುರುಹುಗಳು________ ನೆಲೆಯಲ್ಲಿ ಕಂಡುಬಂದಿದೆ.

**ಉತ್ತರ: ಪಾಕಿಸ್ತಾನದ ಮೆಹರ್‌ಗರ್**

## II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

**1. ಇತಿಹಾಸದ ಮೂರು ಪ್ರಧಾನ ಕಾಲಗಳು ಯಾವುವು?**

**ಉತ್ತರ:** ಇತಿಹಾಸವನ್ನು ಮೂರು ಪ್ರಧಾನಕಾಲಗಳಾಗಿ ವರ್ಗೀಕರಿಸಿಕೊಳ್ಳಬಹುದು. ಅವುಗಳೆಂದರೆ:

1. ಪ್ರಾಗೈತಿಹಾಸ ಕಾಲ
2. ಪೂರ್ವಭಾವಿ ಇತಿಹಾಸಕಾಲ
3. ಇತಿಹಾಸಕಾಲ

**2. ಭೂಮಿಯು ಯಾವಾಗ ಹುಟ್ಟಿತು?**

**ಉತ್ತರ:** ಭೂಮಿಯು 4600 ದಶ ಲಕ್ಷವರ್ಷಗಳ ಹಿಂದೆ ಹುಟ್ಟಿತು

**3. ಹಳೆಯ ಶಿಲಾಯುಗದ ಮಾನವರ ಉಪಕರಣಗಳನ್ನು ಹೆಸರಿಸಿ.**

**ಉತ್ತರ:** ಹೆರೆಚಕ್ಕೆ, ಚಾಕು, ಕಲ್ಲುಳಿ, ಮೊನೆ ಮುಂತಾದ ದೊಡ್ಡ ದಡ್ಡ ಶಿಲಾ ಉಪಕರಣಗಳನ್ನು ಬಳಸುತ್ತಿದ್ದರು

**4. ಮಧ್ಯಶಿಲಾಮಯುಗವನ್ನು ಏಕೆ ಸೂಕ್ಷ್ಮ ಶಿಲಾಯುಗ ಎಂದು ಕರೆಯುತ್ತಾರೆ?**

**ಉತ್ತರ:** ಈ ಕಾಲದ ಮಾನವರು ದೊಡ್ಡ ದೊಡ್ಡ ಶಿಲಾ ಉಪಕರಣಗಳ ಬದಲು ಕೌಶಲ್ಯಭರಿತ ಕರು ಆಯುಧಗಳನ್ನು ಬಳಸಲಾರಂಭಿಸಿದರು.ಆದ್ದರಿಂದ ಮಧ್ಯಯುಗವನ್ನು 'ಸೂಕ್ಷ್ಮ ಶಿಲಾಯುಗ' ಎಂದು ಕರೆಯುವರು.

**5. ಯಾವ ಯುಗದಲ್ಲಿ ಮಾನವರು ಕೃಷಿ ಮಾಡಲಾರಂಭಿಸಿದರು?**

**ಉತ್ತರ:** ನವಶಿಲಾಯುಗದಲ್ಲಿ ಮಾನವರು ಕೃಷಿ ಮಾಡಲಾರಂಭಿಸಿದರು

**6. ಮಾನವರು ಬಳಸಿದ ಮೊದಲ ಲೋಹ ಯಾವುದು?**

**ಉತ್ತರ:** ಮಾನವರು ಬಳಸಿದ ಮೊದಲ ಲೋಹ ತಾಮ್ರ

**7. ಬೃಹತ್ ಶಿಲಾಯುಗದ ಸಮಾಧಿಗಳನ್ನು ಜನಸಾಮಾನ್ಯರು ಏನೆಂದು ಕರೆಯುತ್ತಾರೆ?**

**ಉತ್ತರ:** ಪಾಂಡವರ ಗುಡಿ/ ಮನೆ ಮೌರ್ಯರ ಕಲ್ಲು ಎಂದು ಕರೆಯುತ್ತಾರೆ

**8. ಕರ್ನಾಟಕದಲ್ಲಿರುವ ಪ್ರಮುಖ ಬೃಹತ್ ಶಿಲಾಯುಗದ ನೆಲೆಗಳನ್ನು ಹೆಸರಿಸಿ.**

**ಉತ್ತರ:** ಬನವಳ್ಳಿ, ಹಿರೆಬೆನಕಲ್ಲು, ಬ್ರಹ್ಮಗಿರಿ, ಕೊಪ್ಪ, ಹೆಗ್ಗಡೆಹಳ್ಳಿ, ಟಿ. ನರಸಿಪುರ, ಹೆಮ್ಮಿಗೆ, ಹಳ್ಳೂರು, ಜಡಿಗೇನಹಳ್ಳಿ. ಸಾವನದುರ್ಗ, ಹುತ್ರಿದುರ್ಗ, ಪಾಂಡವರ ದಿಣ್ಣೆ,

# ಅಧ್ಯಾಯ -4 : ಪ್ರಾಚೀನ ನಾಗರಿಕತೆಗಳು

### ಪ್ರಶ್ನೆಗಳು ಮತ್ತು ಉತ್ತರಗಳು:

### ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.

**1.** ಈಜಿಪ್ಟ್ ನಾಗರಿಕತೆ **ನೈಲ್** ನದಿ ತೀರದಲ್ಲಿ ಹುಟ್ಟಿತು.

**2.** ಗಿಜ್ಜೆ ಎಂಬಲ್ಲಿ ಜಗತ್ತಿನ ದೊಡ್ಡ ಪಿರಮಿಡ್ ಕಟ್ಟಿಸಿದ ಫೆರೋ **ಖುಫು**

**3.** ಜಗತ್ತಿನ ಮೊತ್ತಮೊದಲ ಸಾಮ್ರಾಜ್ಞೆ **ಹ್ಯಾಕ್ಷೆಪ್‌ಸುಟ್**

**4.** ಸಿಂಹದೇಹ, ಮನುಷ್ಯ ಮುಖವನ್ನು ಹೊಂದಿರುವ ಈಜಿಪ್ಟಿನ ಶಿಲ್ಪವನ್ನು **ಸ್ಫಿಂಕ್ಸ್** ಎನ್ನುತ್ತಾರೆ.

## ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

**1. ಜಗತ್ತಿನ ಉದ್ದವಾದ ನದಿ ಯಾವುದು?**

**ಉತ್ತರ:** ಜಗತ್ತಿನ ಉದ್ದವಾದ ನದಿ ನೈಲ್.

2. ಈಜಿಪ್ಟ್ ನೈಲ್ ನದಿಯ ವರಪ್ರಸಾದ ಎಂದು ಕರೆಯುತ್ತಾರೆ ಏಕೆ?

**ಉತ್ತರ:** ನೈಲ್‌ನದಿ ಈಜಿಪ್ಟ್‌ನ್ನು ಹಾದು ಹೋಗುತ್ತದೆ. ನೈಲ್ ನದಿ ಇಲ್ಲದೇ ಹೋಗಿದ್ದಲ್ಲಿ ಈಜಿಪ್ಟ್ ಸಂಪೂರ್ಣ ಮರುಭೂಮಿಯಾಗಿರುತ್ತಿತ್ತು. ಆದ್ದರಿಂದ ಈಜಿಪ್ಟ್‌ನ್ನು ನೈಲ್ ನದಿಯ ವರಪ್ರಸಾದ ಎಂದು ಎಂದು ಕರೆಯುವರು.

**3. ಫೆರೋ ಎಂದರೆ ಯಾರು? ಪ್ರಮುಖ ಫೆರೋಗಳನ್ನು ಹೆಸರಿಸಿ.**

**ಉತ್ತರ:** ಈಜಿಪ್ಟ್‌ನ ರಾಜರನ್ನು ಫೆರೋ ಎಂದು ಕರೆಯುತ್ತಿದ್ದರು. ಪ್ರಮುಖ ಫೆರೋಗಳೆಂದರೆ, ಖುಫು, ಅಮೇನ್‌ಹೋಟೆಫ್, ಥಟ್ಮೋಸ್.

**4. ಜಗತ್ತಿನ ದೊಡ್ಡ ಪಿರಮಿಡ್ ಯಾವುದು? ಅದನ್ನು ಕಟ್ಟಿಸಿದವರು ಯಾರು?**

**ಉತ್ತರ:** ಜಗತ್ತಿನ ದೊಡ್ಡ ಪಿರಮಿಡ್ ಗಿಜ್ಜೆ ಪಿರಮಿಡ್, ಅದನ್ನು ಕಟ್ಟಿಸಿದವರು ಖುಫು.

**5. 'ಮಮ್ಮಿ' ಎಂದರೇನು?**

**ಉತ್ತರ:** ಸಂರಕ್ಷಿಸಿಟ್ಟ ಶವಗಳನ್ನು 'ಮಮ್ಮಿ' ಎನ್ನುವರು.

**6.ಪ್ರಾಚೀನ ಈಜಿಪ್ಟಿಯನ್ನರ ಲಿಪಿ ಯಾವುದು?**

**ಉತ್ತರ:** ಪ್ರಾಚೀನ ಈಜಿಪ್ಟಿಯನ್ನರ ಲಿಪಿ ಹೈರೋಗ್ಲಿಫಿಕ್ಸ್.

## I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.

1. ಅಸುರ್‌ಬನಿಪಾಲನು **ನಿನೆವ್ಹ** ನಗರದಲ್ಲಿ ಗ್ರಂಥಾಲಯ ನಿರ್ಮಿಸಿದನು.
2. ಸುಮೇರಿಯೆನ್ನರು **ಕ್ಯೂನಿಫಾರಂ** ಲಿಪಿಗಳಲ್ಲಿ ಬರೆಯುತ್ತಿದ್ದರು.
3. ಜಗತ್ತಿನಲ್ಲಿ ಮೊದಲ ಬಾರಿಗೆ ಕಾನೂನು ಸಂಹಿತೆಗಳನ್ನು ಜಾರಿಗೆ ತಂದ ರಾಜ **ಹಮ್ಮುರಬಿ.**

## II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

**1. ಮೆಸೊಪೊಟೇಮಿಯಾ ಯಾವ ನದಿಗಳ ತೀರದಲ್ಲಿ ಏಳಿಗೆಗೆ ಬಂದಿತು?**

**ಉತ್ತರ:** ಮೆಸೊಪೊಟೇಮಿಯಾ ಟೈಗ್ರಿಸ್ ಮತ್ತು ಯುಫ್ರೆಟಿಸ್ ನದಿಗಳ ತೀರದಲ್ಲಿ ಏಳಿಗೆಗೆ ಬಂದಿತು.

**2. ಮೆಸೊಪೊಟೇಮಿಯವನ್ನು ಆಳಿದ ಜನಾಂಗಗಳು ಯಾವುವು?**

**ಉತ್ತರ:** ಸುಮೇರರು, ಬ್ಯಾಬಿಲೋನಿಯರು, ಹಿಟ್ಟೈಟರು, ಅಸ್ಸಿರಿಯನ್ನರು.

**3. ಮೆಸೊಪೊಟೇಮಿಯಾದ ನಗರ ರಾಜ್ಯಗಳು ಯಾವುವು?**

**ಉತ್ತರ:** ಮೆಸೊಪೊಟೇಮಿಯಾದ ನಗರ ರಾಜ್ಯಗಳೆಂದರೆ ಉರ್(ಗಡಿ) ಕಿಶ್, ಲಗಾಶ್.

**4. ಹಮ್ಮುರಬಿ ಕುರಿತು ಟಿಪ್ಪಣಿ ಬರೆಯಿರಿ.**

**ಉತ್ತರ:** ಹಮ್ಮುರಬಿ ಬ್ಯಾಬಿಲೋನಿಯರಲ್ಲಿ ಪ್ರಸಿದ್ದನಾದ ರಾಜ. ಈತನು ತನ್ನ ಕಾನೂನು ಸಂಹಿತೆಗಳ ಮೂಲಕ ಜಗತ್ಪ್ರಸಿದ್ಧನಾಗಿದ್ದಾನೆ. 'ಮುಯ್ಯಿಗೆ ಮುಯ್ಯಿ' ಎಂಬ ತತ್ವದ ಮೇಲೆ ಈ ಕಾನೂನುಗಳಿವೆ. ಹಮ್ಮುರಬಿಯು ಜಗತ್ತಿನಲ್ಲಿ ಮೊದಲ ಬಾರಿಗೆ ಕಾನೂನು ಸಂಹಿತೆಗಳನ್ನು ಜಾರಿಗೆ ತಂದನು.

**5. ಬ್ಯಾಬಿಲಾನ್ ನಗರದ ತೂಗು ಉದ್ಯಾನ ನಿರ್ಮಿಸಿದವರು ಯಾರು?**

**ಉತ್ತರ:** ಬ್ಯಾಬಿಲಾನ್ ನಗರದ ತೂಗು ಉದ್ಯಾನ ನಿರ್ಮಿಸಿದವರು ನೆಬುಖಡ್ನೆಜರ್.

**6. 'ಜಿಗ್ಗುರಾತ್ ಎಂದರೇನು?**

**ಉತ್ತರ:** ಮೆಸೊಪೊಟೇಮಿಯನ್ನರು ಪ್ರತಿ ನಗರ ದೇವತೆಗಳಿಗೆ ಎತ್ತರವಾದ ದೇವಾಲಯ ಕಟ್ಟುತ್ತಿದ್ದರು ಇದೇ 'ಜಿಗ್ಗುರಾತ್'.

**7. ಮೆಸೊಪೊಟೇಮಿಯನ್ನರ ಮಹಾಕಾವ್ಯವನ್ನು ಹೆಸರಿಸಿ.**

**ಉತ್ತರ:** ಮೆಸೊಪೊಟೇಮಿಯನ್ನರ ಮಹಾಕಾವ್ಯ 'ಗಿಲ್ಲಮೇಶ್'.

## I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.

1. ಚೀನಾ ಮತ್ತು ರೋಮ್ ನಡುವಿನ ವ್ಯಾಪಾರ ಮಾರ್ಗವು **ರೇಷ್ಮೆ** ಮಾರ್ಗವೆಂದು ಪ್ರಸಿದ್ಧಿ ಹೊಂದಿತ್ತು.
2. ಚೀನಿಯರು **ಚಿತ್ರ** ಲಿಪಿಯ ಮೂಲಕ ಬರೆಯುತ್ತಿದ್ದರು.

## II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

**1. ಚೀನಾ ನಾಗರಿಕತೆ ಯಾವ ನದಿತೀರದಲ್ಲಿ ವಿಕಾಸ ಹೊಂದಿತು?**

**ಉತ್ತರ:** ಚೀನಾ ನಾಗರಿಕತೆ ಯಂಗ್‌ತ್ಸೆ ಮತ್ತು ಹ್ವಾಂಗ್‌ಹೊ ನದಿ ತೀರದಲ್ಲಿ ವಿಕಾಸ ಹೊಂದಿತು.

**2. ಚೀನಾವನ್ನು ಆಳಿದ ಪ್ರಮುಖ ಮನೆತನಗಳನ್ನು ಹೆಸರಿಸಿ.**

**ಉತ್ತರ:** ಚೀನಾವನ್ನು ಆಳಿದ ಪ್ರಮುಖ ಮನೆತನಗಳೆಂದರೆ ಷಾಂಗ್, ಚೌಚಿನ್, ಹಾನ್.

**3. ಚೀನಾದ ಮಹಾಗೋಡೆಯನ್ನು ಯಾರು ನಿರ್ಮಿಸಿದರು? ಏಕೆ?**

**ಉತ್ತರ:** ಚೀನಾದ ಮಹಾಗೋಡೆಯನ್ನು ಷಿ–ಹ್ವಾಂಗ್–ತಿ ನಿರ್ಮಿಸಿದರು. ಏಕೆಂದರೆ ಶತ್ರುಗಳ ದಾಳಿಯನ್ನು ತಡೆಯಲು 1500 ಮೈಲಿ ಉದ್ದದ ಚೀನಾ ಮಹಾಗೋಡೆಯನ್ನು ನಿರ್ಮಾಣ ಮಾಡಿದನು.

**4. ವು–ತಿ ದೊರೆಯನ್ನು ಕುರಿತು ಟಿಪ್ಪಣಿ ಬರೆಯಿರಿ.**

**ಉತ್ತರ:** ವು–ತಿ ವಂಶದ ಪ್ರಸಿದ್ಧ ದೊರೆ. ಇವನ ಕಾಲದಲ್ಲಿ ಚೀನಾ ವಿಶಾಲವಾಗಿ ವಿಸ್ತರಣೆಗೊಂಡಿತು. ವಾಣಿಜ್ಯ ವ್ಯಾಪಾರಕ್ಕೆ ಉತ್ತೇಜನ ದೊರೆಯಿತು. ರೇಷ್ಮೆ ಮಾರ್ಗದ ಮೂಲಕ ರೋಮ್ ಮತ್ತು ಚೀನಾದ ನಡುವೆ ವ್ಯಾಪಾರ ನಡೆಯುತ್ತಿತ್ತು.

**5. ಪ್ರಾಚೀನ ಜಗತ್ತಿಗೆ ಚೀನಿಯರು ನೀಡಿದ ಕೊಡುಗೆಗಳನ್ನು ಪಟ್ಟಿಮಾಡಿ.**

**ಉತ್ತರ:** ಪ್ರಾಚೀನ ಜಗತ್ತಿಗೆ ಚೀನಿಯರು ನೀಡಿದ ಕೊಡುಗೆಗಳೆಂದರೇ ಚಹಾ, ರೇಷ್ಮೆ ಕಾಗದ, ಸಿಡಿಮದ್ದು, ಚಿತ್ರಕುಂಚ, ಪಿಂಗಾಣಿ, ದಿಕ್ಸೂಚಿ.

**6. ಚೀನಾ ದೇಶದ ಪ್ರಮುಖ ತತ್ವಜ್ಞಾನಿಗಳನ್ನು ಹೆಸರಿಸಿ.**

**ಉತ್ತರ:** ಚೀನಾ ದೇಶದ ಪ್ರಮುಖ ತತ್ವಜ್ಞಾನಿಗಳೆಂದರೆ ಲಾವೋತ್ಸೆ ಮತ್ತು ಕನ್‌ಫ್ಯೂಶಿಯಸ್.

## I. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

**1. ಪ್ರಾಚೀನ ಗ್ರೀಕರಲ್ಲಿದ್ದ ಪಂಗಡಗಳು ಯಾವುವು?**

**ಉತ್ತರ:** ಪ್ರಾಚೀನ ಗ್ರೀಕರಲ್ಲಿ ಅಯೋಲಿಯನ್, ಅಯೋನಿಯನ್, ಡೋರಿಯನ್

**2. ಪ್ರಾಚೀನ ಗ್ರೀಕಿನ ನಗರ ರಾಜ್ಯಗಳು ಯಾವುವು?**

**ಉತ್ತರ:** ಪ್ರಾಚೀನ ಗ್ರೀಕಿನ ನಗರ ರಾಜ್ಯಗಳೆಂದರೆ ಅಥೆನ್ಸ್ ಮತ್ತು ಸ್ಪಾರ್ಟಾ.

**3. ಅಥೆನ್ಸ್ ಕುರಿತು ಟಿಪ್ಪಣಿ ಬರೆಯಿರಿ.**

**ಉತ್ತರ:** ಅಥೆನ್ಸ್ ಗ್ರೀಸ್‌ನಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಹೊಂದಿದ ಆದರ್ಶ ನಗರರಾಜ್ಯ, ಪೆರಿಕ್ಲಿಸ್‌ನ ಕಾಲದಲ್ಲಿ ಕಲೆ, ಸಾಹಿತ್ಯ, ವಿಜ್ಞಾನ, ತತ್ವಜ್ಞಾನ ಮುಂತಾದ ಕ್ಷೇತ್ರಗಳು ಅಸಾಧಾರಣ ಪ್ರಗತಿ ಕಂಡವು. ಆದ್ದರಿಂದ ಅಥೆನ್ಸ್‌ನ್ನು 'ಹೆಲ್ಲಾಸ್‌ನ ಶಾಲೆ' ಎಂದು ಪೆರಿಕ್ಲಿಸ್ ಕರೆದಿದ್ದಾನೆ.

**4. ಗ್ರೀಸಿನ ಪ್ರಮುಖ ಇತಿಹಾಸಕಾರರು ಯಾರು?**

**ಉತ್ತರ:** ಇತಿಹಾಸದ ಪಿತಾಮಹಾ ಎನಿಸಿದ ಹೆರೋಡೊಟಸ್ ಮತ್ತು ಥುಸಿಡೀಡಿಸ್.

**5. ಹೋಮರನ ಕೃತಿಗಳನ್ನು ಹೆಸರಿಸಿ.**

**ಉತ್ತರ:** 'ಇಲಿಯಾಡ್' ಮತ್ತು 'ಒಡಿಸ್ಸಿ' ಹೋಮರನ ಕೃತಿಗಳಾಗಿವೆ.

**6. 'ವೈದ್ಯಶಾಸ್ತ್ರದ ಪಿತಾಮಹ' ಯಾರು?**

**ಉತ್ತರ:** 'ವೈದ್ಯಶಾಸ್ತ್ರದ ಪಿತಾಮಹ' ಹಿಪ್ಪಾಕ್ರಿಟಾಸ್.

## II. ಕೆಳಗಿನ 'ಎ' ಪಟ್ಟಿ ಮತ್ತು 'ಬಿ' ಪಟ್ಟಿಯಲ್ಲಿನ ವಿಷಯಗಳನ್ನು ಹೊಂದಿಸಿ ಬರೆಯಿರಿ.

| ಎ | ಬಿ | ಉತ್ತರ: |
|---|---|---|
| ಅಥೆನ್ಸ್ | ಪಾರ್ಥೆನಾನ್ ದೇವಾಲಯ | **ನಗರ ರಾಜ್ಯ** |
| ಪ್ಲೇಟೋ | ಮ್ಯಾಸಿಡೋನಿಯಾದ ದೊರೆ | **ಅಕಾಡೆಮಿ** |
| ಪೆರಿಕ್ಲಿಸ್ | ಗ್ರೀಕ್ ನಾಟಕಕಾರ | **ಪಾರ್ಥೆನಾನ್ ದೇವಾಲಯ** |
| ಅಲೆಕ್ಸಾಂಡರ್ | ಅಕಾಡೆಮಿ | **ಮ್ಯಾಸಿಡೋನಿಯಾದ ದೊರೆ** |
| ಈಸ್ಕಿಲಸ್ | ನಗರ ರಾಜ್ಯ | **ಗ್ರೀಕ್ ನಾಟಕಕಾರ** |

## I. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

**1. ರೋಮನ್ನರ ಮೂಲ ಪುರುಷರು ಯಾರು?**

**ಉತ್ತರ:** ರೋಮುಲಸ್ ಮತ್ತು ರೀಮಸ್ ರೋಮನ್ನರ ಮೂಲ ಪುರುಷರು.

**2. ಮೊದಲ ತ್ರಿಮೂರ್ತಿಗಳನ್ನು ಹೆಸರಿಸಿ.**

**ಉತ್ತರ:** ಕ್ರಾಸಸ್, ಪಾಂಪೆ, ಜೂಲಿಯಸ್ ಮೊದಲ ತ್ರಿಮೂರ್ತಗಳಾಗಿದ್ದಾರೆ.

**3. ಜೂಲಿಯಸ್ ಸೀಸರ್‌ನ ಕಾಲದಲ್ಲಿ ಪ್ರಗತಿಸಾಧಿಸಿ, ಕ್ಷೇತ್ರಗಳು ಯಾವುವು?**

**ಉತ್ತರ:** ಜೂಲಿಯಸ್ ಸೀಸರ್‌ನು ಕೃಷಿ, ಕೈಗಾರಿಕೆ, ವ್ಯಾಪಾರ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿದನು.

**4. ಅಗಸ್ಟಸ್ ಸಿಸರ್ ಕುರಿತು ಟಿಪ್ಪಣಿ ಬರೆಯಿರಿ.**

**ಉತ್ತರ:** ಅಗಸ್ಟಸ್ ಸಿಸರ ಮೊದಲ ಹೆಸರು ಆಕ್ಟೇವಿಯಸ್, ಲೆಪಿಡಸ್ಸನನ್ನು ಓಡಿಸಿ ಆಂಟೋನಿಯ ಜೊತೆಗೆ ರಾಜ್ಯವನ್ನು ಹಂಚಿಕೊಂಡನು. ನಂತರ ಆಂಟೋನಿಯನ್ನು ಸೋಲಿಸಿ ಎಲ್ಲಾ ಅಧಿಕಾರಗಳನ್ನು ತನ್ನಲ್ಲಿಟ್ಟುಕೊಂಡನು. ಇವನ ಕಾಲವನ್ನು 'ಸುವರ್ಣಯುಗ' ಎಂದು ಕರೆಯುವರು. ಯೇಸು ಕ್ರೈಸ್ತ ಕೂಡ ಇವನ ಕಾಲದಲ್ಲಿಯೇ ಬದುಕಿದ್ದನು. ಇವನ ಕಾಲವನ್ನು 'ಶಾಂತಿಯ ಕಾಲ' ಎನ್ನುವರು.

**5. ರೋಮ್ ನಾಗರಿಕತೆಯ ಕಾಲದ ಪ್ರಮುಖ ಕವಿಗಳನ್ನು ಹೆಸರಿಸಿ.**

**ಉತ್ತರ:** ರೋಮ್ ನಾಗರಿಕತೆಯ ಕಾಲದ ಪ್ರಮುಖ ಕವಿ ವರ್ಜಿಲ್, ಒವಿಡ್, ಸಿಸಿರೊ, ಪ್ಲೌಟಸ್.

**6. ರೋಮನ್ ತತ್ವಜ್ಞಾನಿಗಳನ್ನು ಹೆಸರಿಸಿ.**

**ಉತ್ತರ:** ರೋಮನ್ ತತ್ವಜ್ಞಾನಿಗಳೆಂದರೆ ಸಿಸಿರೊ, ಸೆನೆಕಾ,.

**7. ರೋಮನ್ನರ ಕೊಡುಗೆಗಳನ್ನು ಪಟ್ಟಿಮಾಡಿ.**

**ಉತ್ತರ:**

ಕಲೋಸಿಯಂ, ಎಂಪಿಥೇಟರ್ ಶ್ರೇಷ್ಠ ವಾಸ್ತುಶಿಲ್ಪಕ್ಕೆ ಉದಾಹರಣೆಯಾಗಿದೆ.

ಕ್ಯುಪಿಡನ್ ಪ್ರತಿಮೆ, ಅರಾಪೆಸಿಸ್ ಶಿಲ್ಪಗಳು ಶಿಲ್ಪಕಲೆಗೆ ಉದಾಹರಣೆಯಾಗಿದೆ.

ಇವರಿಗೆ ವಿಜ್ಞಾನ ಮತ್ತು ಗಣಿತ ಕ್ಷೇತ್ರದಲ್ಲಿ ಆಳವಆದ ಜ್ಞಾನವಿತ್ತು.

ಪ್ಲಿನಿಯು 'ನ್ಯಾಚುರಲ್ ಹಿಸ್ಟರಿ' ಎಂಬ ವಿಶ್ವಕೋಶ ರಚಿಸಿದನು.

ಗ್ಯಾಲನ್ ಪ್ರಸಿದ್ದ ತಜ್ಞವೈದ್ಯ, ಸ್ಟ್ರಾಬೋ, ಟಾಲೆಮಿ ಖ್ಯಾತ ಭೂಗೋಳ ತಜ್ಞರಾಗಿದ್ದರು.
ಇವರ ಕಾನೂನು ಎಲ್ಲ ಕಾನೂನುಗಳಗೆ ಬುನಾದಿಯಾಗಿದೆ. ಲ್ಯಾಟಿನ್ ಇವರ ಭಾಷೆಯಗಿತ್ತು.

## II. ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿ.

**1. ಅಗಸ್ಟಸ್ ಸೀಸರನ ಸಾಧನೆಗಳನ್ನು ತಿಳಿಸಿ.**

**ಉತ್ತರ:** ಅಗಸ್ಟಸ್ ಸಿಸರ ಮೊದಲ ಹೆಸರು ಆಕ್ಟೇವಿಯಸ್,
ಲೆಪಿಡಸ್ಸನನ್ನು ಓಡಿಸಿ ಆಂಟೋನಿಯ ಜೊತೆಗೆ ರಾಜ್ಯವನ್ನು ಹಂಚಿಕೊಂಡನು.
ನಂತರ ಆಂಟೋನಿಯನ್ನೂ ಅಗಸ್ಟಸ್ ಸೋಲಿಸಿದನು.
ಅಗಸ್ಟಸ್ ಸಿಸಿರ್‌ನ ಕಾಲವನ್ನು ರೋಮಿನ 'ಸುವರ್ಣಯುಗ'ವೆಂದು ಕರೆಯಲಾಗುವುದು.
ಈ ಕಾಲವನ್ನು ರೋಮಿನ ಶಾಂತಿಯ ಕಾಲ ಎಂದು ಕರೆಯಲಾಗುತ್ತದೆ.
ಈ ಅವಧಯಲ್ಲಿ ರೋಮ್ ಆರ್ಥಿಕ ಮತ್ತು ಸಾಂಸ್ಕೃತಿಕ ಪ್ರಗತಿ ಸಾಧಿಸಿತು.

## III. ಕೆಳಗಿನ 'ಎ' ಪಟ್ಟಿ ಮತ್ತು 'ಬಿ' ಪಟ್ಟಿಯಲ್ಲಿನ ವಿಷಯಗಳನ್ನು ಹೊಂದಿಸಿ ಬರೆಯಿರಿ.

| ಎ | ಬಿ | ಉತ್ತರ |
|---|---|---|
| 1.ರೋಮ್ | ನ್ಯಾಚುರಲ್ ಹಿಸ್ಟರಿ | **ಸೀಸರ್ ಟೈಬರ್ ನದಿ** |
| 2.ಅಗಸ್ಟಸ್ ಸೀಸರ್ | ಟೈಬರ್ ನದಿ | **ರೋಮಿನ ಸುವರ್ಣಯುಗ** |
| 3.ಹಿರಿಯ ಪ್ಲಿನಿ | ರೋಮಿನ ಸುವರ್ಣಯುಗ | **ನ್ಯಾಚುರಲ್ ಹಿಸ್ಟರಿ** |
| 4.ಗ್ಯಾಲನ್ | ರೋಮಿನ ವಾಸ್ತುಶಿಲ್ಪ | **ರೋಮಿನ ತಜ್ಞವೈದ್ಯ** |
| 5.ಕಲೋಸಿಯಂ | ರೋಮಿನ ತಜ್ಞವೈದ್ಯ | **ರೋಮಿನ ವಾಸ್ತುಶಿಲ್ಪ** |

## I. ಖಾಲಿ ಬಿಟ್ಟ ಸ್ಥಳವನ್ನು ಸೂಕ್ತ ಪದದಿಂದ ಭರ್ತಿ ಮಾಡಿ.

1. ಲೋಥಾಲ್ ಹರಪ್ಪ ನಾಗರಿಕತೆಯ ಪ್ರಸಿದ್ಧ **ಬಂದರು** ಆಗಿತ್ತು.
2. ಮೆಸೊಪೊಟೇಮಿಯನ್ನರು ಹರಪ್ಪ ನಾಗರಿಕತೆಯನ್ನು **ಮೆಲುಹ** ಎಂದು ಕರೆಯುತ್ತಿದ್ದರು.
3. ಹರಪ್ಪನ್ನರು **ಪಶುಪತೆ, ಮಾತೃ** ದೇವತೆಯನ್ನು ಪೂಜಿಸುತ್ತಿದ್ದರು.

## II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

**1.ಹರಪ್ಪ ನಾಗರಿಕತೆಯ ಎರಡು ಮುಖ್ಯ ನಗರಗಳು ಯಾವುವು?**

**ಉತ್ತರ:** ಮೊಹೆಂಜೊದಾರೋ ಕಾಲಿಬಂಗನ್, ದೋಲಾವೀರಾ, ಲೋಥಾಲ್, ರಾಖಿಘರಿ.

**2. ಜಗತ್ತಿನಲ್ಲಿ ಹತ್ತಿಯನ್ನು ಬೆಳೆದ ಮೊದಲ ದೇಶ ಯಾವುದು?**

**ಉತ್ತರ:** ಜಗತ್ತಿನಲ್ಲಿ ಹತ್ತಿಯನ್ನು ಬೆಳೆದ ಮೊದಲ ದೇಶ ಭಾರತ.

**3. ಹರಪ್ಪ ನಾಗರಿಕತೆಯ ಜನರು ಯಾವ ದೇವರುಗಳನ್ನು ಪೂಜಿಸುತ್ತಿದ್ದರು?**

**ಉತ್ತರ:** ಪಶುಪತಿ (ಶಿವ) ಮಾತೃದೇವತೆ ಅಶ್ವತ್ಥಮರ, ಸೂರ್ಯ, ಅಗ್ನಿ, ಭೂಮಿ, ಜಲ, ನಾಗರಹಾವು

**4. ಹರಪ್ಪ ನಾಗರಿಕತೆಯ ಸಾರ್ವಜನಿಕ ಸ್ನಾನಗೃಹ ಎಲ್ಲಿ ಕಂಡು ಬಂದಿದೆ?**

**ಉತ್ತರ:** ಮೆಹೆಂಜೊದಾರೋದಲ್ಲಿ ಕಂಡು ಬಂದಿದೆ.

**5. ಹರಪ್ಪ ನಾಗರಿಕತೆಯ ಹಡಗುಕಟ್ಟೆ ಕಂಡುಬಂದ ಸ್ಥಳವನ್ನು ಹೆಸರಿಸಿ.**

**ಉತ್ತರ:** ಹರಪ್ಪ ನಾಗರಿಕತೆಯ ಹಡಗುಕಟ್ಟೆ ಕಂಡುಬಂದ ಸ್ಥಳ ಲೋಥಾಲ್.

**6. ಹರಪ್ಪ ನಾಗರಿಕತೆಯ ನಗರಗಳು ಅವನತಿ ಹೊಂದಲು ಯಾವುದಾದರೂ ಎರಡು ಕಾರಣಗಳನ್ನು**

ಬರೆಯಿರಿ.

**ಉತ್ತರ:**

* ಸಿಂಧೂ ಮತ್ತು ಅದರ ಉಪನದಿಗಳಲ್ಲಿ ಆಗಾಗ ಉಂಟಾಗುತ್ತಿದ್ದ ನೆರೆ ಹಾವಳಿಗಳು.
* ಸಾಂಕ್ರಮಿಕ ರೋಗದ ಪ್ರಸಾರ

### III. ಕೆಳಗಿನ ಪ್ರಶ್ನೆಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿ.

**1. ಹರಪ್ಪ ನಾಗರಿಕತೆಯು ಅವನತಿ ಹೊಂದಲು ಕಾರಣಗಳೇನು?**

**ಉತ್ತರ:** ಹರಪ್ಪ ನಾಗರಿಕತೆಯು ಅವನತಿ ಹೊಂದಲು ಅನೇಕ ಕಾರಣಗಳಿವೆ. ಅವುಗಳೆಂದರೆ

* ಸಿಂಧೂ ಮತ್ತು ಅದರ ಉಪನದಿಗಳಲ್ಲಿ ಆಗಾಗ ಉಂಟಾಗುತ್ತಿದ್ದ ನೆರೆ ಹಾವಳಿಗಳು.
* ಇಟ್ಟಿಗೆಗಳನ್ನು ಸುಡಲು ಮರಮುಟ್ಟುಗಳ ಅತಿಯಾದ ಬಳಕೆಯಿಂದ ಕಾಡುಗಳ ನಾಶ ಮತ್ತು ಇದರ ಪರಿಣಾಮವಾಗಿ ಜನರ ವಲಸೆ,
* ಹೊರಗಿನಿಂದ ಬಂದ ಆರ್ಯರು ಹರಪ್ಪನ್ನರ ಮೇಲೆ ನಡೆಸಿರಬಹುದಾದ ಆಕ್ರಮಣ.
* ಸಾಂಕ್ರಮಿಕ ರೋಗದ ಪ್ರಸಾರ

**2. ಹರಪ್ಪ ನಾಗರಿಕತೆ ಮತ್ತು ನಿಮ್ಮ ಊರಿನ / ನಗರದ ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ಜೀವನದಲ್ಲಿ ಕಾಣುವ ಸಮಾನ ಅಂಶಗಳನ್ನು ಚರ್ಚಿಸಿ**

**ಉತ್ತರ:**

ಹರಪ್ಪ ನಾಗರಿಕತೆ ಮತ್ತು ನಮ್ಮ ಊರಿನ ನಡುವೆ ಸಮಾನ ಅಂಶಗಳಿವೆ. ಹೇಗೆಂದರೆ

ಹರಪ್ಪ ಜನರಲ್ಲಿ ಸ್ವಚ್ಛತೆ, ಯೋಜನೆ, ರಕ್ಷಣೆಗೆ ಪ್ರಾಶಸ್ತ್ಯ ನೀಡಿರುವಂತೆ ನಮ್ಮ ಊರಿನಲ್ಲಿ ಸ್ವಚ್ಛಭಾರತ ಯೋಜನೆ ರೂಪಿಸಿಕೊಂಡಿದ್ದೇವೆ.

ಒಳಚರಂಡಿ ವ್ಯವಸ್ಥೆ, ಶೌಚಾಲಯ ನಿರ್ಮಾಣ, ಬೀದಿ ಕಸದ ವ್ಯವಸ್ಥಿತ ಸಾಗಾಟ ಚೆನ್ನಾಗಿದೆ.

ಹರಪ್ಪದ ಸಾರ್ವಜನಿಕ ಸ್ನಾನಗೃಹದಂತೆ ನಮ್ಮ ಊರಿನಲ್ಲಿ ದೊಡ್ಡ ಕೆರೆಯಿದೆ. ಈ ಕೆರೆಯನ್ನು ಊರಿನವರ ಪರಿಶ್ರಮದಿಂದ ಹೂಳು ತೆಗೆಯಲಾಗಿದೆ.

ಚರಂಡಿ, ಕಲುಷಿತ ನೀರು ಕೆರೆಗೆ ಸಾಗದಂತೆ ಎಚ್ಚರವಹಿಸಲಾಗಿದೆ.

ಇನ್ನು ಹರಪ್ಪದ ಜನರು ಪಶುಪತಿ ಪೂಜಿಸುವಂತೆ ನಮ್ಮ ಊರಿನ ಜನರು ಶಿವನನ್ನು ಆರಾಧಿಸುತ್ತಾರೆ. ಅಲ್ಲಿ ಸ್ತ್ರೀ ಪುರುಷರು ಆಭರಣಗಳನ್ನು ಬಳಸುತ್ತಿದ್ದರು, ಆದರೆ ನಮ್ಮ ಊರಿನಲ್ಲಿ ಬಹುಶಃ ಹರಪ್ಪ ಜನರ ಸ್ತ್ರೀಯರು ಧರಿಸುವಂತೆ ಆಭರಣಗಳನ್ನೆ ಧರಿಸುತ್ತಾರೆ.

## ಅಧ್ಯಾಯ–5 ವೇದಕಾಲದ ಸಂಸ್ಕೃತಿ

### ಪ್ರಶ್ನೆಗಳು ಮತ್ತು ಉತ್ತರಗಳು:

### I. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ನಾಲ್ಕು ವೇದಗಳು ಯಾವುವು?

**ಉತ್ತರ:** ಋಗ್ವೇದ, ಯಜುರ್ವೇದ, ಅಥರ್ವವೇದ, ಸಾಮವೇದ ವೇದಗಳ ನಾಲ್ಕು ವಿಧಗಳಾಗಿವೆ.

2. ಋಗ್ವೇದ ಕಾಲದ ದೇವರುಗಳನ್ನು ಹೆಸರಿಸಿ.

**ಉತ್ತರ:** ಇಂದ್ರ, ಸೂರ್ಯ, ಸೋಮ, ವರುಣ, ಮಿತ್ರ, ಯಮ, ಅಶ್ವಿನಿ ಋಗ್ವೇದ ಕಾಲದ ದೇವರುಗಳು.

3. ನಾಲ್ಕು ವರ್ಣಗಳನ್ನು ಹೆಸರಿಸಿ.

**ಉತ್ತರ:** ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬುದೇ ನಾಲ್ಕು ವರ್ಣಗಳು.

4. ವೇದಕಾಲದ ಇಬ್ಬರು ಶ್ರೇಷ್ಠ ಮಹಿಳಾ ವಿದ್ವನ್ಮಣಿಗಳು ಯಾರು?

**ಉತ್ತರ:** ಘೋಷಾ, ಅಪಾಲಾ, ಲೋಪಮುದ್ರ, ಇಂದ್ರಾಣಿ, ವಿಶ್ವವರಾ

5. ಭಾರತದ ಪ್ರಾಚೀನ ಮಹಾಕಾವ್ಯಗಳು ಯಾವುವು? ಇವುಗಳನ್ನು ರಚಿಸಿದವರು ಯಾರು?

**ಉತ್ತರ:** ಭಾರತದ ಪ್ರಾಚೀನ ಮಹಾಕಾವ್ಯಗಳು ರಾಮಾಯಣ, ಮಹಾಭಾರತ.
ವಾಲ್ಮೀಕಿ ರಾಮಾಯಣವನ್ನು, ವೇದವ್ಯಾಸರು ಮಹಾಭಾರತವನ್ನು ರಚಿಸಿದರು.

## II. ಕೆಳಗಿನ ಪ್ರಶ್ನೆಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿ.

**1. ಪೂರ್ವ ವೇದಕಾಲದ ಸಮಾಜಕ್ಕೂ, ಉತ್ತರ ವೇದಕಾಲದ ಸಮಾಜಕ್ಕೂ ಇರುವ ವ್ಯತ್ಯಾಸಗಳೇನು?**

**ಉತ್ತರ:** **ಪೂರ್ವವೇದ ಕಾಲ**

*ಕುಟುಂಬ ಸಮಾಜದ ಮೂಲ ಘಟಕ

*ತಂದೆ ಕುಟುಂಬದ ಮುಖ್ಯಸ್ಥ

*ಸ್ತ್ರೀಯರಿಗೆ ಸೂಕ್ತ ಸ್ಥಾನಗಳಿದ್ದವು.ವೇದಾಧ್ಯಯನ ಮಾಡುತ್ತಿದ್ದರು.

*ಬಾಲ್ಯವಿವಾಹ, ಸಹಗಮನ ಪದ್ದತಿ ಈ ಕಾಲದಲ್ಲಿರಲಿಲ್ಲ.

*ಏಕಪತ್ನಿತ್ವ ಇರಲಿಲ್ಲ.

**ಉತ್ತರವೇದ ಕಾಲ**

*ಗೋತ್ರ ಪದ್ಧತಿ ಆರಂಭವಾಯಿತು

*ಚಾತುರಾಶ್ರಮ ವ್ಯವಸ್ಥೆ ಆರಂಭವಾಯಿತು.

*ಸ್ತ್ರೀಯರ ಸ್ಥಾನಮಾನ ಕುಂಠಿತವಾಯಿತು.

ಶಿಕ್ಷಣದಿಂದ ವಂಚಿತರಾದರು.

ಬಾಲ್ಯವಿವಾಹ, ಸತಿಸಹಗಮನ ಪದ್ದತಿ ಆರಂಭವಾಯಿತು.

*ಬಹುಪತ್ನಿತ್ವ ರೂಢಿಯಲ್ಲಿತ್ತು.

## III. ಕೆಳಗಿನ 'ಎ' ಪಟ್ಟಿ ಮತ್ತು 'ಬಿ' ಪಟ್ಟಿಯಲ್ಲಿನ ವಿಷಯಗಳನ್ನು ಹೊಂದಿಸಿ ಬರೆಯಿರಿ.

| ಎ | ಬಿ | ಉತ್ತರ |
|---|---|---|
| ಸೋಮ | ಬಣದ ಮುಖ್ಯಸ್ಥ | **ಆರ್ಯರಿಗೆ ಪರಿಚಯವಿದ್ದ ಪಾನೀಯ** |
| ರಾಜನ್ | ಆರ್ಯರಿಗೆ ಪರಿಚಯವಿದ್ದ ಪಾನೀಯ | **ಬಣದ ಮುಖ್ಯಸ್ಥ** |
| ಸಭಾ | ಒಂದು ಯಾಗ | **ರಾಜಕೀಯ ಸಂಸ್ಥೆ** |
| ಅಶ್ವಮೇಧ | ರಾಮಾಯಣ | **ಒಂದು ಯಾಗ** |
| ವಾಲ್ಮಿಕಿ | ರಾಜಕೀಯ ಸಂಸ್ಥೆ | **ರಾಮಾಯಣ** |

## ಅಧ್ಯಾಯ-6 ಕ್ರೈಸ್ತ ಧರ್ಮ ಮತ್ತು ಇಸ್ಲಾಂ ಧರ್ಮ

### ಪ್ರಶ್ನೆಗಳು ಮತ್ತು ಉತ್ತರಗಳು:

### ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.

**1. ಯೇಸುಕ್ರಿಸ್ತ ಎಲ್ಲಿ ಜನಿಸಿದನು? ಅವನ ತಾಯಿ ಯಾರು?**

**ಉತ್ತರ:** ಯೇಸುಕ್ರಿಸ್ತನು ಬೆತ್ಲೆಹೆಂ (ಇಸ್ರೇಲಿ) ಎಂಬಲ್ಲಿ ಜನಿಸಿದನು. ಅವನ ತಾಯಿ ಮೇರಿ.

**2. ಕ್ರೈಸ್ತಮತದ ಮೂಲಗ್ರಂಥ ಯಾವುದು?**

**ಉತ್ತರ:** ಕ್ರೈಸ್ತಮತದ ಮೂಲಗ್ರಂಥ 'ಬೈಬಲ್'.

**3. ಯೇಸುಕ್ರಿಸ್ತನ ಮುಖ್ಯ ಬೋಧನೆಗಳು ಯಾವುವು?**

**ಉತ್ತರ:** ನಾವೆಲ್ಲ ದೇವರ ಮಕ್ಕಳು.

ನಾವೆಲ್ಲ ಸಹೋದರ-ಸಹೋದರಿಯರು.

ಪಾಪಗಳನ್ನು ಮಾಡದೆ ಶುದ್ಧ ಜೀವನ ನಡೆಸಬೆಕು.

ನಿಮ್ಮ ನೆರರೆಯವರನ್ನು ನಿಮ್ಮಂತೆ ಪ್ರೀತಿಸಿ. ಇವು ಯೇಸುವುಇ ಜಗತ್ತಿಗೆ ಭೋಧಿಸಿದ ಶ್ರೇಷ್ಠ ಭೋಧನೆಗಳು.

**4. ಮಹಮ್ಮದ್ ಪೈಗಂಬರ ಎಲ್ಲಿ ಜನಿಸಿದರು? ಇಸ್ಲಾಮಿನ ಮೂಲಗ್ರಂಥ ಯಾವುದು?**

**ಉತ್ತರ:** ಮಹಮ್ಮದ್ ಪೈಗಂಬರನು ಅರಬ್ ದೇಶದ ಮೆಕ್ಕ ನಗರದಲ್ಲಿ ಜನಿಸಿದರು. ಇಸ್ಲಾಮಿನ ಮೂಲಗ್ರಂಥ ಕುರಾನ್ ಇದು ಅರೇಬಿಕ್ ಭಾಷೆಯಲ್ಲಿದೆ.

**5. ಪ್ರವಾದಿ ಮಹಮ್ಮದರ ಮುಖ್ಯ ಬೋಧನೆಗಳು ಯಾವುವು?**

**ಉತ್ತರ:**

*ಅಲ್ಲಾನ ಹೊರತು ಬೇರೆ ದೇವರಿಲ್ಲ; ಮಹಮ್ಮದ್ ಅವರು ದೇವರ ಪ್ರವಾದಿ. ದೇವರನ್ನು ಯಾವ ಮೂರ್ತಿಯ ರೂಪದಲ್ಲೂ ಪೂಜಿಸಬಾರದು.

*ಪ್ರತಿಯೊಬ್ಬ ಮುಸಲ್ಮಾನನೂ ದೇವರ ಸೇವಕನಾಗಬೇಕು. ಪ್ರಾಮಾಣಿಕನಾಗಿರಬೇಕು. ಎಲ್ಲಾ ಮಾನವರೂ ಸಮಾನರು.

*ಪ್ರತಿಯೊಬ್ಬ ಮುಸಲ್ಮಾನನೂ ದಿನಕ್ಕೆ ಐದು ಬಾರಿ ಕಾಬಾದ ದಿಕ್ಕಿಗೆ ಮುಖ ಮಾಡಿ ಪ್ರಾರ್ಥನೆ (ನಮಾಜ್) ಮಾಡಬೇಕು.

*ರಮ್‌ಜಾನ್ ತಿಂಗಳಲ್ಲಿ ಹಗಲು ಉಪವಾಸ ಮಾಡಬೇಕು.

*ಶ್ರೀಮಂತರು ಬಡವರಿಗೆ ಕಡ್ಡಾಯವಾಗಿ ದಾನ (ಜಕಾತ್) ನೀಡಬೇಕು.

* ಸಾಧ್ಯವಾದಲ್ಲಿ ಜೀವಮಾನದಲ್ಲಿ ಒಂದು ಸಲವಾದರೂ 'ಹಜ್' (ಮೆಕ್ಕ) ಯಾತ್ರೆ ಮಾಡಬೇಕು

## ಅಧ್ಯಾಯ-7 ಹೊಸ ಧರ್ಮಗಳ ಉದಯ

### ಪ್ರಶ್ನೆಗಳು ಮತ್ತು ಉತ್ತರಗಳು:

### I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.

1. ಗೌತಮ ಬುದ್ಧನು **ಲುಂಬಿನಿ** ಎಂಬಲ್ಲಿ ಜನಿಸಿದನು.
2. ಬುದ್ಧನು ತನ್ನ ಉಪದೇಶವನ್ನು **ಪಾಲಿ** ಭಾಷೆಯಲ್ಲಿ ಬೋಧಿಸಿದನು.
3. 'ಜಿನ' ಎಂದರೆ **ಮೋಹ** ವನ್ನು ಗೆದ್ದವನು ಎಂದರ್ಥ.
4. ಜೈನಧರ್ಮದ 23ನೇ ತೀರ್ಥಂಕರ **ಪಾರ್ಶ್ವ**.
5. ಜೈನಧರ್ಮದಲ್ಲಿ ಬಿಳಿಯ ವಸ್ತ್ರ ಧರಿಸುವವರು **ಶ್ವೇತಾಂಬರ** ಪಂಥೀಯರು.

### II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

**1. ಗೌತಮ ಬುದ್ಧನು ಜನಿಸಿದ ಸ್ಥಳ ಯಾವುದು?**

**ಉತ್ತರ:** ಗೌತಮ ಬುದ್ಧನು ಲುಂಬಿನಿ ಸ್ಥಳದಲ್ಲಿ ಜನಿಸಿದನು.

**2. ಗೌತಮ ಬುದ್ಧನ ತಂದೆ, ತಾಯಿ ಯಾರು?**

**ಉತ್ತರ:** ಗೌತಮ ಬುದ್ಧನ ತಂದೆ ಶುದ್ಧೋದನ, ತಾಯಿ ಮಾಯಾದೇವಿ.

**3. ಗೌತಮ ಬುದ್ಧನು ತನ್ನ ಮೊದಲ ಉಪದೇಶವನ್ನು ಎಲ್ಲಿ ನೀಡಿದನು?**

**ಉತ್ತರ:** ಉತ್ತರ ಪ್ರದೇಶದ ವಾರಣಾಸಿಯ ಬಳಿ **ಸಾರನಾಥ** ಎಂಬಲ್ಲಿ ನೀಡಿದನು.

**4. 'ಧರ್ಮಚಕ್ರ ಪ್ರವರ್ತನಾ' ಎಂದರೇನು?**

**ಉತ್ತರ:** ಗೌತಮ ಬುದ್ಧನು ತನ್ನ ಉಪದೇಶವನ್ನು ಮೊದಲ ಬಾರಿಗೆ ನೀಡಿದ ಘಟನೆಯನ್ನು 'ಧರ್ಮಚಕ್ರ ಪ್ರವರ್ತನಾ' ಎಂದು ಕರೆಯುತ್ತಾರೆ.

**5. ಮಹಾವೀರನು ಯಾವ ಸ್ಥಳದಲ್ಲಿ ಜನಿಸಿದನು?**

**ಉತ್ತರ:** ಮಹಾವೀರನು ವೈಶಾಲಿ ಸಮೀಪದ ಕುಂದ ಸ್ಥಳದಲ್ಲಿ ಜನಿಸಿದನು.

**6. ಮಹಾವೀರನ ತಂದೆ, ತಾಯಿ ಯಾರು?**

**ಉತ್ತರ:** ಮಹಾವೀರನ ತಂದೆ ಸಿದ್ದಾರ್ಥ, ತಾಯಿ ತ್ರಿಶಾಲಾದೇವಿ.

**7. ಮಹಾವೀರನು ಏನೆಂದು ಬೋಧಿಸಿದನು?**

**ಉತ್ತರ:** ಹಿಂಸೆ, ಕಳ್ಳತನ, ಸಂಪತ್ತಿನ ಸಂಗ್ರಹ ಮಾಡದಿರಲು, ಸುಳ್ಳು ಹೇಳದಿರಲು ಬೋಧಿಸಿದನು.

**8. ಜೈನ ಧರ್ಮದ ಎರಡು ಪಂಥಗಳು ಯಾವುವು?**

**ಉತ್ತರ:** ಶ್ವೇತಾಂಬರರು ಮತ್ತು ದಿಗಂಬರರು ಜೈನ ಧರ್ಮದ ಎರಡು ಪಂಥಗಳಾಗಿವೆ.

**9. ಪ್ರಾಚೀನ ಭಾರತದಲ್ಲಿ ಪ್ರಮುಖವಾಗಿದ್ದ ಗಣರಾಜ್ಯವನ್ನು ಹೆಸರಿಸಿ.**

**ಉತ್ತರ:** ಪ್ರಾಚೀನ ಭಾರತದಲ್ಲಿ ಪ್ರಮುಖವಾಗಿದ್ದ ಗಣರಾಜ್ಯ ವಜ್ಜಿ, ಮಗಧ, ಕೋಸಲ, ವತ್ಸ.

### III. ಕೆಳಗಿನಪ್ರಶ್ನೆಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿ.

**1. ಬುದ್ಧನ ಉಪದೇಶಗಳೇನು?**

**ಉತ್ತರ:** ಬುದ್ದನ ಪ್ರಕಾರ ಜಗತ್ತು ಅಪಾರ ದುಃಖದಿಂದ ಕೂಡಿದೆ. ಆಸೆಯೇ ದುಃಖದ ಮೂಲ. ಆಸೆಯನ್ನು ಜಯಿಸಿದವರು ನಿರ್ವಾಣ (ಮುಕ್ತಿ) ಹೊಂದುವರು. ದುಃಖ ನಿವಾರಣೆಗಾಗಿ ಒಳ್ಳೆಯ ನೋಟ, ಸಂಕಲ್ಪಮಾತು, ಕಾರ್ಯ ಮೊದಲಾದ ಎಂಟು ಮಾರ್ಗ ಸೂಚಿಸಿದನು.

ಇವಲ್ಲದೆ ತನ್ನ ಅನುಯಾಯಿಗಳಿಗೆ ಹಿಂಸೆ, ಮಧ್ಯಪಾನ, ಭ್ರಷ್ಟಚಾರ ಮಾಡದಿರಲು, ಸುಳ್ಳು ಹೇಳದಿರಲು ಉಪದೇಶಿಸಿದನು.

### IV. ಕೆಳಗಿನ 'ಎ' ಪಟ್ಟಿ ಮತ್ತು 'ಬಿ' ಪಟ್ಟಿಯಲ್ಲಿನ ವಿಷಯಗಳನ್ನು ಹೊಂದಿಸಿ ಬರೆಯಿರಿ.

| ಎ | ಬಿ | **ಉತ್ತರ** |
|---|---|---|
| ಗೌಶತಮ ಬುದ್ಧ | ಗಣರಾಜ್ಯ | **ಬೌದ್ಧಧರ್ಮದ ಸ್ಥಾಪಕ** |
| ಮಹಾವೀರ | ಬೌದ್ಧರ ಪವಿತ್ರಗ್ರಂಥಗಳು | **ಜೈನಧರ್ಮದ ಸ್ಥಾಪಕ** |
| ವಜ್ಜಿ | ಜೈನರ ಧಾರ್ಮಿಕ ಕೇಂದ್ರ | **ಬುದ್ಧ ಗಣರಾಜ್ಯ** |
| ಶ್ರವಣಬೆಳಗೊಳ | ಬೌದ್ಧಧರ್ಮದ ಸ್ಥಾಪಕ | **ಜೈನರ ಧಾರ್ಮಿಕ ಕೇಂದ್ರ** |
| ತ್ರಿಪಿಟಕ | ಜೈನಧರ್ಮದ ಸ್ಥಾಪಕ | **ಬೌದ್ಧರ ಪವಿತ್ರಗ್ರಂಥಗಳು** |

## ಅಧ್ಯಾಯ–8 : ಉತ್ತರ ಭಾರತದ ಪ್ರಮುಖ ರಾಜ ಮನೆತನಗಳು

### ಪ್ರಶ್ನೆಗಳು ಮತ್ತು ಉತ್ತರಗಳು:

### I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.

1. ಸೆಲ್ಯೂಕಸನು ಚಂದ್ರಗುಪ್ತ ಮೌರ್ಯನ ಆಸ್ಥಾನಕ್ಕೆ ಕಳುಹಿಸಿಕೊಟ್ಟ ರಾಯಭಾರಿ **ಮೆಗಸ್ತನಿಸ್**.
2. ಪ್ರಜೆಗಳೆಲ್ಲರು ನನ್ನ ಮಕ್ಕಳಿದ್ದಂತೆ ಎಂದು ಹೇಳಿದ ಸಾಮ್ರಾಟ **ಅಶೋಕ**.
3. ಅಶೋಕನ ಶಾಸನಗಳು ಪ್ರಧಾನವಾಗಿ **ಬ್ರಾಹ್ಮಿ** ಲಿಪಿಯಲ್ಲಿ ಕಂಡುಬಂದಿವೆ.
4. ಅಶೋಕನು ಅಧಿಕಾರಕ್ಕೆ ಬಂದ **ಎಂಟನೆ** ವರ್ಷದಂದು ಕಳಿಂಗ ರಾಜ್ಯದ ಮೇಲೆ ಯುದ್ಧ ಸಾರಿದ.
5. ನಮ್ಮ ರಾಷ್ಟ್ರ ಲಾಂಛನ **ನಾಲ್ಕು ತಲೆಯ ಸಿಂಹ ಭೋದಿಗೆ**.
6. ಕನಿಷ್ಕನು ಅಧಿಕಾರಕ್ಕೆ ಬಂದ ನೆನಪಿಗಾಗಿ **ಶಕ** ವರ್ಷವನ್ನು ಪ್ರಾರಂಭಿಸಿದ.

### II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

**1. ಮೌರ್ಯ ಸಾಮ್ರಾಜ್ಯದ ಸ್ಥಾಪಕನು ಯಾರು?**

**ಉತ್ತರ :** ಮೌರ್ಯ ಸಾಮ್ರಾಜ್ಯದ ಸ್ಥಾಪಕನು ಚಂದ್ರಗುಪ್ತ ಮೌರ್ಯ.

**2. ಮೌರ್ಯರ ರಾಜ್ಯಧಾನಿಯನ್ನು ಹೆಸರಿಸಿ.**

**ಉತ್ತರ :** ಮೌರ್ಯರ ರಾಜಧಾನಿ ಪಾಟಲೀಪುತ್ರ.

**3. ಕೌಟಿಲ್ಯಬರೆದ ಗ್ರಂಥ ಯಾವುದು?**

**ಉತ್ತರ :** ಕೌಟಿಲ್ಯಬರೆದ ಗ್ರಂಥ ಅರ್ಥಶಾಸ್ತ್ರ.

**4. ಮೆಗಸ್ತನೀಸ್ ಬರೆದ ಗ್ರಂಥದ ಹೆಸರೇನು?**

**ಉತ್ತರ :** ಮೆಗಸ್ತನೀಸ್ ಬರೆದ ಗ್ರಂಥದ ಹೆಸರು 'ಇಂಡಿಕಾ'.

**5. "ಪ್ರಜೆಗಳೆಲ್ಲರು ತನ್ನ ಮಕ್ಕಳಿದ್ದಂತೆ". ಹೀಗೆಂದು ನುಡಿದ ಸಾಮ್ರಾಟನು ಯಾರು?**

**ಉತ್ತರ :** "ಪ್ರಜೆಗಳೆಲ್ಲರು ತನ್ನ ಮಕ್ಕಳಿದ್ದಂತೆ". ಹೀಗೆಂದು ನುಡಿದ ಸಾಮ್ರಾಟ ಅಶೋಕ.

**6. "ಧರ್ಮಮಹಾಮಾತ್ರರು" ಮಾಡುತ್ತಿದ್ದ ಕಾರ್ಯಗಳು ಯಾವುವು?**

**ಉತ್ತರ :** "ಧರ್ಮಮಹಾಮಾತ್ರರು" ಎಂಬ ವಿಶೇಷ ಅಧಿಕಾರಗಳು ಜನರಲ್ಲಿ ಉತ್ತಮ ನೀತಿ ನಡತೆಯನ್ನು ಪ್ರಚಾರ ಮಾಡುತ್ತಿದ್ದರು.

**7. ಕನಿಷ್ಕನು ಬೌದ್ಧ ಮಹಾಸಭೆಯನ್ನು ಎಲ್ಲಿ ನಡೆಸಿದನು?**

**ಉತ್ತರ :** ಕನಿಷ್ಕನು ಬೌದ್ಧ ಮಹಾಸಭೆಯನ್ನು ಕಾಶ್ಮೀರದಲ್ಲಿ ನಡೆಸಿದನು.

**8. ಅಶ್ವಘೋಷನ ಕೃತಿ ಯಾವುದು?**

**ಉತ್ತರ :** ಅಶ್ವಘೋಷನ 'ಕೃತಿ ಬುದ್ಧಚರಿತ'.

### III. ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿ.

**1. ಕಳಿಂಗ ಯುದ್ಧದ ಮಹತ್ವ ಕುರಿತು ಬರೆಯಿರಿ.**

**ಉತ್ತರ :**

* ಕಳಿಂಗ ರಾಜ್ಯವು ಇಂದಿನ ಒಡಿಶಾ ರಾಜ್ಯದ ಭಾಗವಾಗಿದ್ದು ಇದರ ಮೇಲೆ ಅಶೋಕನು ಯುದ್ಧ ನಡೆಸಿದನು.
* ಈ ಯದ್ಧದಲ್ಲಿ ಒಂದು ಲಕ್ಷ ಜನರು ಪ್ರಾಣ ಕಳೆದುಕೊಂಡರು. ಒಂದು ಲಕ್ಷ ಜನರು ಗಾಯಗೊಂಡರು. ಒಂದೂವರೆ ಲಕ್ಷ ಶತೃ ಸೈನಿಕರು ಬಂಧಿತರಾದರು.

ರಣರಂಗದಲ್ಲಿ ಸಾವಿನ ಘೋರ ದೃಶ್ಯ ಅಶೋಕನ ಮನಕಲಕಿದವು. ಇದರಿಂದ ಮನನೊಂದ ಅಶೋಕ ಆ ಕ್ಷಣದಿಂದಲೇ ಯುದ್ಧ ಮಾಡದಿರಲು ನಿರ್ಧರಿಸಿದನು.

* ಯುದ್ಧ ಮಾರ್ಗದ ಬದಲು ಧರ್ಮ ಮಾರ್ಗವನ್ನು ಹಿಡಿದ ಸಾಮ್ರಾಟ ಅಶೋಕನಂತೆ ಸಾಮ್ರಾಟ ಜಗತ್ತಿನ ಇತಿಹಾಸದಲ್ಲಿಯೇ ಇಲ್ಲ.

## IV. ಕೆಳಗಿನ 'ಎ' ಪಟ್ಟಿ ಮತ್ತು 'ಬಿ' ಪಟ್ಟಿಯಲ್ಲಿನ ವಿಷಯಗಳನ್ನು ಹೊಂದಿಸಿ ಬರೆಯಿರಿ.

| ಎ | ಬಿ | **ಉತ್ತರ** |
|---|---|---|
| ಅಶೋಕ | ಕನಿಷ್ಕಪುರ | **ದೇವನಾಂಪ್ರಿಯ** |
| ಕನಿಷ್ಕ | ಬುದ್ಧಚರಿತ | **ಕನಿಷ್ಕಪುರ** |
| ಅಶ್ವಘೋಷ | ಕಲಾಕೇಂದ್ರ | **ಬುದ್ಧಚರಿತ** |
| ಗಂಧಾರ | ದೇವನಾಂಪ್ರಿಯ | **ಕಲಾಕೇಂದ್ರ** |

## I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.

1. ಗುಪ್ತರ ರಾಜಧಾನಿ **ಪಾಟಲೀಪುತ್ರ.**
2. ಅಲಹಾಬಾದಿನ ಸ್ತಂಭ ಶಾಸನವನ್ನು ರಚಿಸಿದವರು **ಹರಿಸೇಣ**
3. 'ಕವಿರಾಜ' ಬಿರುದು ಹೊಂದಿದ್ದ ಗುಪ್ತರ ರಾಜ **ಸಮುದ್ರಗುಪ್ತ.**
4. ಮುದ್ರಾರಾಕ್ಷಸ ಕೃತಿಯನ್ನು ಬರೆದವರು **ವಿಶಾಖದತ್ತ.**
5. 'ಕವಿಕುಲಗುರು' ಎಂಬ ಬಿರುದನ್ನು ಹೊಂದಿದ್ದ ಮಹಾಕವಿ **ಕಾಳಿದಾಸ.**

## II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

**1. ಅಲಹಾಬಾದ್ ಸ್ತಂಭಶಾಸನದಲ್ಲಿ ಯಾವ ಚಕ್ರವರ್ತಿಯ ವಿವರಗಳಿವೆ?**

**ಉತ್ತರ :** ಅಲಹಾಬಾದ್ ಸ್ತಂಭಶಾಸನದಲ್ಲಿ ಸಮುದ್ರಗುಪ್ತ ಚಕ್ರವರ್ತಿಯ ವಿವಿರಗಳಿವೆ.

**2. 'ವಿಕ್ರಮಾದಿತ್ಯ' ಎಂಬುದು ಯಾವ ಗುಪ್ತ ಸಾಮ್ರಾಟನ ಬಿರುದಾಗಿತ್ತು?**

**ಉತ್ತರ :** 'ವಿಕ್ರಮಾದಿತ್ಯ' ಎಂಬುದು ಎರಡನೆಯ ಚಂದ್ರಗುಪ್ತ ಸಾಮ್ರಾಟನ ಬಿರುದಾಗಿತ್ತು.

**3. ಗುಪ್ತರ ಕಾಲದಲ್ಲಿ ಭಾರತಕ್ಕೆ ಭೇಟಿ ನೀಡಿದ್ದ ಚೀನಿ ಯಾತ್ರಿಕ ಯಾರು?**

**ಉತ್ತರ :** ಗುಪ್ತರ ಕಾಲದಲ್ಲಿ ಭಾರತಕ್ಕೆ ಭೇಟಿ ನೀಡಿದ್ದ ಚೀನಿ ಯಾತ್ರಿಕ ಫಾಹಿಯಾನ್.

**4. ಕಾಳಿದಾಸನು ರಚಿಸಿದ ಯಾವುದಾದರೂ ಒಂದು ನಾಟಕವನ್ನು ಹೆಸರಿಸಿ.**

**ಉತ್ತರ :** ಕಾಳಿದಾಸನು ಅಭಿಜ್ಞಾನ ಶಾಕುಂತಲಂ' ಎಂಬ ನಾಟಕ ರಚಿಸಿದ್ದಾನೆ.

**5. 'ಮೃಚ್ಛಕಟಿಕ' ಯಾರು ರಚಿಸಿದ ಕೃತಿಯಾಗಿದೆ?**

**ಉತ್ತರ :** 'ಮೃಚ್ಛಕಟಿಕ' 'ಶೂದ್ರಕ' ರಚಿಸಿದ ಕೃತಿಯಾಗಿದೆ

**6. ಅಮರಸಿಂಹನು ರಚಿಸಿದ ಶಬ್ದಕೋಶ ಯಾವುದು?**

**ಉತ್ತರ :** ಅಮರಸಿಂಹನು ರಚಿಸಿದ ಶಬ್ದಕೋಶ ಅಮರಕೋಶ.

**7. ಧಮೇಖ್ ಸ್ತೂಪ ಎಲ್ಲಿದೆ?**

**ಉತ್ತರ :** ಧಮೇಖ್ ಸ್ತೂಪ ಸಾರನಾಥದಲ್ಲಿದೆ.

**8. ಗುಪ್ತರ ಕಾಲದ ಪ್ರಸಿದ್ಧ ಗಣಿತಶಾಸ್ತ್ರಜ್ಞನ ಹೆಸರೇನು?**

**ಉತ್ತರ :** ಗುಪ್ತರ ಕಾಲದ ಪ್ರಸಿದ್ಧ ಗಣಿತಶಾಸ್ತ್ರಜ್ಞ ಬ್ರಹ್ಮಗುಪ್ತ.

**9. 'ಅಷ್ಟಾಂಗ ಹೃದಯ'ವನ್ನು ಸಿದ್ಧಪಡಿಸಿದವರು ಯಾರು?**

**ಉತ್ತರ :** 'ಅಷ್ಟಾಂಗ ಹೃದಯ'ವನ್ನು ಸಿದ್ಧಪಡಿಸಿದವರು ವಾಗ್ಭಟ.

## III. ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿ.

**1. ಸಮುದ್ರಗುಪ್ತನ ಸಾಧನೆಯನ್ನು ಬಣ್ಣಿಸಿ.**

**ಉತ್ತರ :**

* ಸಮುದ್ರಗುಪ್ತನು ಮಹಾಪರಾಕ್ರಮಿ ಅವನ ದಿಗ್ವಿಜಯವನ್ನು ಕುರಿತು ಅಲಹಾಬಾದಿನ ಸ್ಥಂಭದ ಮೇಲಿನ ಶಾಸನವೊಂದು ವಿವರ ನೀಡುತ್ತದೆ.
* ಈ ಶಾಸನವನ್ನು ಸಮುದ್ರಗುಪ್ತನ ಆಸ್ಥಾನ ಕವಿ ಹರಿಸೇಣ ರಚಿಸಿದನು.
* ಅದರಂತೆ ಸಮುದ್ರಗುಪ್ತನು ಉತ್ತರ ಭಾರತದ ಒಂಬತ್ತು ರಾಜರನ್ನು ಸೋಲಿಸಿದನು.
* ದಕ್ಷಿಣ ಭಾರತದ ದಂಡಯಾತ್ರೆ ಕೈಗೊಂಡ ಸಮುದ್ರಗುಪ್ತನು ದಕ್ಷಿಣದ ಹನ್ನೆರಡು ಮಂದಿ ರಾಜರನ್ನು ಸೋಲಿಸಿದನು.
* ಸಮುದ್ರಗುಪ್ತನು ವಿದ್ಯಾಪೋಷಕನಾಗಿದ್ದನು. ಸ್ವತಃ ಕವಿ ಹಾಗೂ ಸಂಗೀತಗಾರನಾಗಿದ್ದ ಆತನು 'ಕವಿರಾಜ' ಎಂಬ ಬಿರುದನ್ನು ಧರಿಸಿದ್ದನು.
* ಸಮುದ್ರಗುಪ್ತನ ಚಿನ್ನದ ನಾಣ್ಯಗಳು ಗುಪ್ತಸಾಮ್ರಾಜ್ಯದ ಶಕ್ತಿ, ಸಂಪತ್ತು ಹಾಗೂ ವೈಭವವನ್ನು ಪ್ರತಿಬಿಂಬಿಸುತ್ತವೆ.

**2. ಸಂಸ್ಕೃತ ಸಾಹಿತ್ಯಕ್ಕೆ ಗುಪ್ತರ ಕೊಡುಗೆಯನ್ನು ವಿವರಿಸಿ.**

**ಉತ್ತರ :**

* ಕಾಳಿದಾಸನು ಗುಪ್ತಕಾಲದ ಮಹಾಕವಿ. ಕಾಳಿದಾಸನು ನಾಲ್ಕು ಕಾವ್ಯಗಳು ಮತ್ತು ಮೂರು ನಾಟಕಗಳನ್ನು ರಚಿಸಿದ್ದಾನೆ. 'ಅಭಿಜ್ಞಾನ ಶಾಕುಂತಲಂ' ಆತನ ಶ್ರೇಷ್ಠ ನಾಟಕ. ಅವನನ್ನು 'ಕವಿಕುಲ ಗುರು' ಎಂಬುದಾಗಿ ಪ್ರಶಂಸೆ ಮಾಡಲಾಗಿದೆ.
* 'ಮೃಚ್ಛಕಟಿಕ' ಬರೆದ ಶೂದ್ರಕ ಮತ್ತು 'ಮುದ್ರರಾಕ್ಷಸ' ಬರೆದ ವಿಶಾಖದತ್ತ ಆ ಕಾಲದ ಇತರ ಪ್ರಸಿದ್ಧ ನಾಟಕಕಾರರು.
* ವಿಷ್ಣುಶರ್ಮನ 'ಪಂಚತಂತ್ರ' ಎಂಬ ಕಥಾಸಂಗ್ರಹವು ಇದೇ ಕಾಲಕ್ಕೆ ಸೇರಿದೆ.
* ಅಮರಸಿಂಹನ 'ಅಮರಕೋಶ' ಎಂಬ ಶಬ್ಧಕೋಶವು ಒಂದು ಅಪರೂಪದ ಕೃತಿ.

## IV. ಕೆಳಗಿನ 'ಎ' ಪಟ್ಟಿ ಮತ್ತು 'ಬಿ' ಪಟ್ಟಿಯಲ್ಲಿನ ವಿಷಯಗಳನ್ನು ಹೊಂದಿಸಿ ಬರೆಯಿರಿ.

| ಎ | ಬಿ | **ಉತ್ತರ** |
|---|---|---|
| ಕವಿರಾಜ | ಫೋ–ಕೋ–ಕಿ | **ಸಮುದ್ರಗುಪ್ತ** |
| ವಿಕ್ರಮಾದಿತ್ಯ | ಖಗೋಳಶಾಸ್ತ್ರಜ್ಞ | **ಎರಡನೆಯ ಚಂದ್ರಗುಪ್ತ** |
| ಫಾಹಿಯಾನ್ | ಸಮುದ್ರಗುಪ್ತ | **ಫೋ–ಕೋ–ಕಿ** |
| ಮೆಹರೌಲಿ | ಎರಡನೆಯ ಚಂದ್ರಗುಪ್ತ | **ಕಬ್ಬಿಣದ ಕಂಬ** |
| ವರಾಹಮಿಹಿರ | ಕಬ್ಬಿಣದ ಕಂಬ | **ಖಗೋಳಶಾಸ್ತ್ರಜ್ಞ** |

## I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.

1. ಹರ್ಷವರ್ಧನನ ಆಪ್ತನಾಗಿದ್ದ ಚೀನಾದ ಪ್ರವಾಸಿ **ಹ್ಯೂಯನ್‌ತ್ಸಾಂಗ್**
2. ಹ್ಯೂಯನ್ ತ್ಸಾಂಗನ ಪ್ರವಾಸ ಕಥನದ ಹೆಸರು **ಸಿ–ಯು–ಕಿ**

**3.** ನಲಂದ ವಿಶ್ವವಿದ್ಯಾಲಯವು ಇಂದಿನ **ಬಿಹಾರ** ರಾಜ್ಯದಲ್ಲಿದೆ.

**4.** ಹರ್ಷವರ್ಧನನನ್ನು ನರ್ಮದಾ ನದಿ ತೀರದಲ್ಲಿ ಸೋಲಿಸಿದ ಕನ್ನಡದ ದೊರೆ

ಉ: **ಎರಡನೇ ಪುಲಿಕೇಶಿ ( ಇಮ್ಮಡಿ ಪುಲಿಕೇಶಿ)**

## II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

**1. ಹರ್ಷವರ್ಧನನ ಅಣ್ಣ ಮತ್ತು ತಂಗಿಯನ್ನು ಹೆಸರಿಸಿ.**

**ಉತ್ತರ :** ಹರ್ಷವರ್ಧನನ ಅಣ್ಣ ರಾಜ್ಯವರ್ಧನ ಮತ್ತು ತಂಗಿ ರಾಜ್ಯಶ್ರೀ.

**2. ಹರ್ಷವರ್ಧನನ ರಾಜಧಾನಿ ಯಾವುದು?**

**ಉತ್ತರ :** ಹರ್ಷವರ್ಧನನ ರಾಜಧಾನಿ ಕನೌಜ್.

**3. 'ಹರ್ಷಚರಿತೆ' ಎಂಬ ಗ್ರಂಥವನ್ನು ಯಾರು ರಚಿಸಿದರು?**

**ಉತ್ತರ :** 'ಹರ್ಷಚರಿತೆ' ಎಂಬ ಗ್ರಂಥವನ್ನು ಬಾಣಭಟ್ಟನು ರಚಿಸಿದರು.

**4. ಹರ್ಷವರ್ಧನನು ರಚಿಸಿದ ನಾಟಕಗಳನ್ನು ಹೆಸರಿಸಿ.**

**ಉತ್ತರ :** ಪ್ರಿಯದರ್ಶಿಕಾ, ರತ್ನಾವಳಿ ಮತ್ತು ನಾಗಾನಂದ

**5. ಹರ್ಷವರ್ಧನನ ಆಸ್ಥಾನಕ್ಕೆ ಬಂದಿದ್ದ ಚೀನಾ ದೇಶದ ಪ್ರವಾಸಿ ಯಾರು?**

**ಉತ್ತರ :** ಹರ್ಷವರ್ಧನನ ಆಸ್ಥಾನಕ್ಕೆ ಬಂದಿದ್ದ ಚೀನಾ ದೇಶದ ಪ್ರವಾಸಿ ಹ್ಯೂಯನ್ ತ್ಸಾಂಗ್.

**6. ಪ್ರಾಚೀನ ಭಾರತದ ಖ್ಯಾತ ವಿಶ್ವವಿದ್ಯಾಲಯ ಯಾವುದು ಮತ್ತು ಎಲ್ಲಿದೆ?**

**ಉತ್ತರ :** ಪ್ರಾಚೀನ ಭಾರತದ ಖ್ಯಾತ ವಿಶ್ವವಿದ್ಯಾಲಯ ನಳಂದ ಇದು ಇಂದಿನ ಬಿಹಾರದಲ್ಲಿದೆ.

# ಅಧ್ಯಾಯ-9 ಪೌರತ್ವ

## ಪ್ರಶ್ನೆಗಳು ಮತ್ತು ಉತ್ತರಗಳು:

### ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.

**1. ಪೌರತ್ವ ಎಂದರೇನು?**

**ಉತ್ತರ :** ಒಂದು ರಾಷ್ಟ್ರ ತನ್ನ ಪ್ರಜೆಗಳಿಗೆ ಒದಗಿಸುವ ಹಕ್ಕುಗಳು ಪೌರತ್ವ ಎನಿಸುತ್ತದೆ. ಅಂದರೇ ಕನಿಷ್ಠ ಜೀವನ ಮಟ್ಟ, ಶಿಕ್ಷಣ, ಆರೋಗ್ಯ, ಸಾಮಾಜಿಕ ಭದ್ರತೆ, ಇನ್ನಿತರ ಹಕ್ಕುಗಳನ್ನು ಕಲ್ಪಿಸಿಕೊಡುವುದೇ ಪೌರತ್ವವಾಗಿದೆ.

**2. ಪೌರತ್ವದ ಲಕ್ಷಣಗಳನ್ನು ಪಟ್ಟಿ ಮಾಡಿ.**

**ಉತ್ತರ :**

1. ವ್ಯಕ್ತಿ ತಾನು ಒಂದು ದೇಶದ ಪ್ರಜೆಯೆಂದು ಪೌರತ್ವದ ಮೂಲಕ ಗುರುತಿಸಿಕೊಳ್ಳುತ್ತಾನೆ.
